# ಕನ್ನಡ

## ಭಾಗ -1

## ತರಗತಿ

## II

Kannada
Part-1
STD-II
Kannada Medium

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
2025

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ,
ಭಾರತ ಭಾಗ್ಯವಿಧಾತಾ,
ಪಂಜಾಬ ಸಿಂಧು ಗುಜರಾತ ಮರಾಠ,
ದ್ರಾವಿಡ ಉತ್ಕಲ ವಂಗ,
ವಿಂಧ್ಯ ಹಿಮಾಚಲ ಯಮುನಾ ಗಂಗಾ,
ಉಚ್ಛಲ ಜಲಧಿತರಂಗ,
ತವಶುಭ ನಾಮೇ ಜಾಗೇ,
ತವಶುಭ ಆಶಿಷ ಮಾಗೇ,
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ, ಜಯಹೇ, ಜಯಹೇ,
ಜಯ ಜಯ ಜಯ ಜಯಹೇ!

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ. ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ದೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

# ಕನ್ನಡ

# 2

**State Council of Educational Research and Training (SCERT)**
Poojappura, Thiruvananthapuram 695012, Kerala
Website : www.scertkerala.gov.in
e-mail : scertkerala@gmail.com, Phone : 0471 - 2341883,
Typesetting and Layout : SCERT
First Edition : 2025
*Printed at* : KBPS, Kakkanad, Kochi-30
© Department of General Education, Government of Kerala

# ಮುನ್ನುಡಿ

ಪ್ರೀತಿಯ ಮಕ್ಕಳೇ,

ಭಾಷೆ ಕೇವಲ ಸಂವಹನದ ಸಾಧನವಲ್ಲ. ಅದು ನಮ್ಮ ಕಣ್ಣಿಗೆ ಸಮಾನವಾಗಿದೆ. ನಾವು ದಿನನಿತ್ಯ ಕಲಿಯುವ ಭಾಷೆಯಲ್ಲಿ ಅದರಲ್ಲೂ ಮಾತೃಭಾಷೆಯಲ್ಲಿ ಮಾತನಾಡಲು, ಓದಲು ಮತ್ತು ಬರೆಯಲು ಕೇವಲ ಮೂಲಭೂತ ಭಾಷಾ ಕೌಶಲ್ಯಗಳಿದ್ದರೆ ಸಾಕಾಗುವುದಿಲ್ಲ.

ಭಾಷೆಯ ಪ್ರಮುಖ ಶಕ್ತಿಯೆಂದರೆ ಅದು ನಮ್ಮನ್ನು ಕಲ್ಪನೆಯ ಕ್ಷೇತ್ರದಿಂದ ಆಚೆಗೆ ಕೊಂಡೊಯ್ಯಬಲ್ಲುದು. ಸೃಜನಶೀಲ ವಿದ್ಯಾರ್ಥಿಗಳಿಗೆ ಭಾಷಾ ಶಿಕ್ಷಣ ಪ್ರೇರಕ ಶಕ್ತಿಯಾಗಲಿ. ಕೆಲವರ ಭಾಷಾ ಶೈಲಿಯೇ ಅವರನ್ನು ಗುರುತಿಸುವಂತೆ ಮಾಡುತ್ತದೆ. ನಾವೂ ನಮ್ಮದೇ ಆದ ಭಾಷೆಯನ್ನು ಬೆಳೆಸಿಕೊಳ್ಳುವುದನ್ನು ಕಲಿಯುತ್ತೇವೆ.

ಪಠ್ಯಪುಸ್ತಕವು ಮುದ್ರಿತ ಪತ್ರಿಕೆಗಳ ಸಂಗ್ರಹವಲ್ಲ; ಅದರಲ್ಲಿ ಉತ್ತಮ ಶಿಕ್ಷಕರು, ವಿಜ್ಞಾನಿಗಳು ಮತ್ತು ತತ್ವಜ್ಞಾನಿಗಳು ಅಡಗಿರುತ್ತಾರೆ. ಪಠ್ಯಪುಸ್ತಕಗಳು ನಮ್ಮ ಬದುಕಿಗೆ ಮಾರ್ಗದರ್ಶಕರು, ಒಬ್ಬರಿಗೊಬ್ಬರು ಬೆರೆಯುವ ಗೆಳೆಯರು, ಹಿತೈಷಿಗಳೂ ಆಗುತ್ತವೆ ಎನ್ನಬಹುದು. ಪಠ್ಯಪುಸ್ತಕವು ನಮಗೆ ಉಪಯುಕ್ತವಾಗಬೇಕು, ನಾವು ಸೇರಿರುವ ಸಮಾಜದ ಸುಖ-ದುಃಖಗಳಲ್ಲಿ ಭಾಗವಹಿಸುವಂತೆ ಮಾಡಬೇಕು ಮತ್ತು ನಾವು ವಾಸಿಸುವ ದೇಶದ ಅಭಿವೃದ್ಧಿಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಉತ್ತಮ ಶಿಕ್ಷಕರ ಸಹಾಯದಿಂದ ನಮ್ಮ ಜ್ಞಾನವನ್ನು ಬೆಳೆಸಿಕೊಳ್ಳಲು ಅವು ಸಹಾಯ ಮಾಡಬೇಕು. ಸುದೃಢ, ಸ್ವಸ್ಥ ಸಮಾಜ ನಿರ್ಮಾಣಕ್ಕೆ ಪಠ್ಯಪುಸ್ತಕವು ಸಹಕಾರಿಯಾಗಬೇಕು. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಈ ಪಠ್ಯಪುಸ್ತಕವನ್ನು ರೂಪಿಸಲಾಗಿದೆ.

ಭಾಷಾ ಪಠ್ಯಪುಸ್ತಕವು ನಿಮ್ಮ ಚಿಂತನೆಯನ್ನು ಶ್ರೀಮಂತಗೊಳಿಸಲಿ.

ಪ್ರೀತಿಯಿಂದ,

**ಡಾ. ಜಯಪ್ರಕಾಶ್ ಆರ್. ಕೆ.**
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ.,ಕೇರಳ

## TEXT BOOK DEVELOPMENT TEAM

### Advisor

**Shivashankar P.,** Assistant Professor
Govinda Pai Memorial College, Manjeshwara

### Chairperson

**Dr. Savitha B.,** Assistant Professor
Government College Kasaragod

### Expert

**Dr. Srikrishna Bhat,** Rtd. Professor, Govt. College Kasaragod
**Sujatha S.,** Assistant Professor., Govt. College Kasaragod
**Narayana D.**, Headmaster, G.H.S. Udyawar

### Members

**Yashoda K. A.**, Headmistress, G.L.P.S. Chandragiri
**Vijaya Kumar P.,** Headmaster, G.S.B.S. Kumbla
**Shreeharsha M. P.,** Headmaster, G.J.B.S. Peral
**Shivarama Bhat S.,** Headmaster, G.L.P.S Kayarkatte
**Sadashiva K. K.**, Headmaster, B.P.P.A.L.P.S., Permude
**Sowmya Kumary**, L.P.S.T Kannada, S.A.P.A.L.P.S. Agalpady
**Melvin D Souza P.,** L.P.S.T. Kannada, G.H.S.S. Bekur
**Divya S.**, L.P.S.T. Kannada, A.U.P.S. Yethadka
**Shashidhara P. K.**, L.P.S.T. Kannada, G.H.S.S. Angadimogar
**Shruthi K. R.**, LPST Kannada, DIET Lab School Maipady

### Artists

**Premkumar Kannom.**, G.G.H.S.S. Payyannur
**Sasi K. C.**, Art Teacher, B.R.C. Kondotty, Malappuram
**Deepesh T.,** C.H.M.H.S.S. Kavumpady
**Manamboor Kalidasan,** Thiruvananthapuram

---

**Academic Co-ordinator**
**Dr. Sahayadas**
Research Officer , S.C.E.R.T.

---


**STATE COUNCIL OF EDUCATION RESEARCH AND TRAINING (SCERT)**
Vidhyabhavan, Poojappura,Thiruvananthapuram 695 012

# ಅನುಕ್ರಮಣಿಕೆ


| ಕ್ರಮ ಸಂಖ್ಯೆ | ಘಟಕ | ಪುಟ ಸಂಖ್ಯೆ |
|---|---|---|
| 1 | ಅನ್ನದ ಬಟ್ಟಲು | 7-26 |
| | ❖ ಮಣ್ಣಿನಲ್ಲಿ ಚಿನ್ನದ ಬೆಳೆ | 8-14 |
| | ❖ ನಾವು ರೈತರು | 15-18 |
| | ❖ ಗೊಲ್ಲನ ಕರುಣೆ | 19-26 |
| 2 | ಭುವಿಯ ಗೆಳೆಯರು | 27-50 |
| | ❖ ಕರಡಿಯ ಉಪಾಯ | 28-36 |
| | ❖ ನೀನು ಬಾರೆ ನವಿಲೆ | 37-42 |
| | ❖ ಸಮುದ್ರದ ಅರಮನೆ | 43-50 |
| 3 | ಎಲ್ಲರೊಳಗೊಂದಾಗು | 51-62 |
| | ❖ ಸ್ವಾತಂತ್ರ್ಯದ ಬೆಳಗು | 52-55 |
| | ❖ ನನ್ನ ದೇಶ ನನ್ನ ಜನ | 56-58 |
| | ❖ ಮಕ್ಕಳ ಮೆಚ್ಚಿನ ಚಾಚಾಜಿ | 59-62 |
| 4 | ಆರೋಗ್ಯವೇ ಭಾಗ್ಯ | 63-78 |
| | ❖ ಊಟ ಬಲ್ಲವನಿಗೆ ರೋಗವಿಲ್ಲ | 64-69 |
| | ❖ ಜಾಣ ಪಂಡಿತ | 70-78 |

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು [1]**[ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ]** ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ** ;
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ** ;
ಸ್ಥಾನಮಾನ ಹಾಗೂ ಅವಕಾಶ **ಸಮಾನತೆ ;**

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು,[2][ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ **ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು; ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ** 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ **ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

---

1. 1976ನೇ ಇಸವಿಯ ಭಾರತ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ" ಎಂಬ ಪದಗಳ ಬದಲಾಗಿ (3-1-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ರಾಷ್ಟ್ರದ ಏಕತೆಯನ್ನೂ" ಎಂಬ ಪದಗಳ ಬದಲಾಗಿ (3 - 1 - 1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

# 1 ಅನ್ನದ ಬಟ್ಟಲು



# ಮಣ್ಣಿನಲ್ಲಿ ಚಿನ್ನದ ಬೆಳೆ

ಕರಿಬೈಲಿನಲ್ಲಿ ರಾಜಪ್ಪನೆಂಬ ಪರಿಶ್ರಮಿಯಾದ ಒಬ್ಬ ಕೃಷಿಕನಿದ್ದನು. ಅವನು ಬಂಜರು ಭೂಮಿಯಾಗಿದ್ದ ತನ್ನ ಜಮೀನಿನಲ್ಲಿ ಕಷ್ಟಪಟ್ಟು ದುಡಿದು ತರ ತರದ ಬೆಳೆಗಳನ್ನು ಬೆಳೆಸತೊಡಗಿದನು. ಅವನ ತರಕಾರಿ ತೋಟವನ್ನು ನೋಡುವುದೇ ಕಣ್ಣಿಗೆ ಹಬ್ಬ. ಆಹಾ! ವಿಧ ವಿಧ ತರಕಾರಿಗಳು. ಅಷ್ಟೇ ಅಲ್ಲ, ವಿಶಾಲವಾದ ಹಚ್ಚಹಸಿರಾದ ಅವನ ಭತ್ತದ ಗದ್ದೆಗಳನ್ನು ನೋಡುವುದೇ ಚಂದ. ರಾಜಪ್ಪನ ವಿಶಾಲವಾದ ತೋಟದಲ್ಲಿ ತೆಂಗು, ಕಂಗು, ಕರಿಮೆಣಸು, ಕೊಕ್ಕೋ, ಜಾಯಿಕಾಯಿ, ಮರಗೆಣಸು, ವೀಳ್ಯದೆಲೆ ಮೊದಲಾದ ಬೆಳೆಗಳು ಬೆಳೆಯುತ್ತಿದ್ದವು.



ರಾಜಪ್ಪನ ಪತ್ನಿ ನೀಲಕ್ಕ ಮನೆಯಲ್ಲಿ ದನ, ಆಡು, ಕೋಳಿಗಳನ್ನು ಸಾಕುತ್ತಿದ್ದಳು. ರಾಜಪ್ಪ ಅವುಗಳಿಂದ ಲಭಿಸುವ ಗೊಬ್ಬರವನ್ನೇ ಹೆಚ್ಚಾಗಿ ಕೃಷಿಗೆ ಬಳಸುತ್ತಿದ್ದನು. ಆದುದರಿಂದಲೇ ಊರಿನ ಜನರೆಲ್ಲರೂ ರಾಜಪ್ಪನಿಂದ ವಿಷವಿಲ್ಲದ ತರಕಾರಿಗಳನ್ನೂ, ಕೃಷಿ ಉತ್ಪನ್ನಗಳನ್ನೂ ಕೊಂಡುಕೊಳ್ಳುತ್ತಿದ್ದರು.



ಒಂದು ದಿನ ರಾಜಪ್ಪನು ತನ್ನ ಹೊಲದಲ್ಲಿ ಟಿಲ್ಲರ್ ಬಳಸಿ ಉಳುಮೆ ಮಾಡುತ್ತಿದ್ದನು. ರಾಜಪ್ಪನ ಮಕ್ಕಳಾದ ಸುಮಾ ಮತ್ತು ಕಿರಣ್ ಅಪ್ಪನಿಗೆ ಕೃಷಿ ಕೆಲಸಗಳಲ್ಲಿ ಸಹಾಯ ಮಾಡುತ್ತಿದ್ದರು. ಅಲ್ಲಿಗೆ ನೆರೆಮನೆಯ ಹಸೀನ ಕೈಯಲ್ಲಿ ಪತ್ರಿಕೆಯೊಂದನ್ನು ಹಿಡಿದು ಓಡುತ್ತಾ ಬಂದಳು “ಸುಮಾ ಸುಮಾ... ನಿನ್ನ ಅಪ್ಪನ ಫೋಟೋ ಪೇಪರಲ್ಲಿ ಬಂದಿದೆ. ಅವರಿಗೆ ಈ ವರ್ಷದ ಅತ್ಯುತ್ತಮ ಕೃಷಿಕ ಪ್ರಶಸ್ತಿ ಲಭಿಸಿದೆ.” ಎಂದು ಒಂದೇ ಉಸಿರಿನಲ್ಲಿ ಹೇಳಿ ಮುಗಿಸಿದಳು. ಈ ಸುದ್ದಿ ಕೇಳಿ ಎಲ್ಲರಿಗೂ ತುಂಬಾ ಖುಷಿಯಾಯಿತು.

*- ಸಮಿತಿ ರಚನೆ*



## ಉತ್ತರಿಸುವ

❖ **ಕೆಳಗೆ ನೀಡಲಾದ ಪ್ರಶ್ನೆಗಳಿಗೆ ಉತ್ತರಿಸಿರಿ.**

1. ರಾಜಪ್ಪನು ತನ್ನ ವಿಶಾಲವಾದ ತೋಟದಲ್ಲಿ ಯಾವ ಯಾವ ಬೆಳೆಗಳನ್ನು ಬೆಳೆಸುತ್ತಿದ್ದನು?

2. ಊರಿನ ಜನರು ಹೆಚ್ಚಾಗಿ ರಾಜಪ್ಪನಿಂದಲೇ ತರಕಾರಿಗಳನ್ನು ಕೊಂಡುಕೊಳ್ಳಲು ಕಾರಣವೇನು?

① ಕಡಿಮೆ ಬೆಲೆಗೆ ಸಿಗುವುದರಿಂದ

② ಜೈವಿಕ ಗೊಬ್ಬರ ಬಳಸುವುದರಿಂದ

③ ರಾಸಾಯನಿಕ ಗೊಬ್ಬರ ಹಾಕುವುದರಿಂದ

④ ಕೀಟನಾಶಕ ಬಳಸುವುದರಿಂದ

3. ರಾಜಪ್ಪನಿಗೆ ಕೃಷಿ ಕೆಲಸಗಳಲ್ಲಿ ಸಹಾಯ ಮಾಡುತ್ತಿದ್ದವರು ಯಾರು?

4. ರಾಜಪ್ಪನಿಗೆ ಲಭಿಸಿದ ಪ್ರಶಸ್ತಿ ಯಾವುದು?

## ಉತ್ತರಿಸುವ

❖ **ಕೆಳಗೆ ನೀಡಲಾದ ಪದಗಳನ್ನು ಬಳಸಿ ಮಾದರಿಯಂತೆ ವಾಕ್ಯ ರಚಿಸಿರಿ.**

- ವಿಧವಿಧದ : ಕಾಮನಬಿಲ್ಲಿನಲ್ಲಿ ವಿಧವಿಧದ ಬಣ್ಣಗಳು ಇವೆ.
- ತರತರದ : ______________________
- ಪಳಪಳನೆ : ______________________
- ಗಬಗಬನೆ : ______________________
- ಗಡಗಡನೆ : ______________________
- ಥಳಥಳನೆ : ______________________

## ಓದುವ

❖ **ಪದಗಳನ್ನು ಗಟ್ಟಿಯಾಗಿ ಓದಿರಿ.**

| | |
|---|---|
| ಕರಿಬೈಲು | ಉತ್ಪನ್ನ |
| ಕೃಷಿಕ | ಟಿಲ್ಲರ್ |
| ಕಷ್ಟಪಟ್ಟು | ಪತ್ರಿಕೆ |
| ಹಚ್ಚಹಸಿರಾದ | ಫೋಟೋ |
| ವಿಷವಿಲ್ಲದ | ಚಿನ್ನದ |
| ಕೈಯಲ್ಲಿ | ಪ್ರಶಸ್ತಿ |

❖ **ಒತ್ತಕ್ಷರಗಳನ್ನು ಬಳಸಿ ಮಾದರಿಯಂತೆ ಪದಗಳನ್ನು ಬರೆಯಿರಿ.**

| | |
|---|---|
| ಕರಿಬೈಲು<br>ಕೈಯಲ್ಲಿ | ಪತ್ರಿಕೆ<br>.................. |
| ..................<br>.................. | ..................<br>.................. |

## ನಿರೀಕ್ಷಿಸುವ

❖ 'ಅತ್ಯುತ್ತಮ ಕೃಷಿಕ ಪ್ರಶಸ್ತಿ' ಪಡೆದ ರಾಜಪ್ಪನ ಮನೆಗೆ ಶಾಲಾ ಮಕ್ಕಳು ಭೇಟಿ ಕೊಟ್ಟರು. ಅವರ ಮನೆಯಲ್ಲಿರುವ ವಿವಿಧ ರೀತಿಯ ಯಂತ್ರಗಳನ್ನು ಮತ್ತು ಕೃಷಿ ಉಪಕರಣಗಳನ್ನು ನೋಡಿದರು. ಕೆಳಗಿನ ಚಿತ್ರಗಳನ್ನು ನೋಡಿ ಅವುಗಳ ಹೆಸರನ್ನು ಆವರಣದಿಂದ ಆರಿಸಿ ಬರೆಯಿರಿ.














ನೇಗಿಲು, ಕತ್ತಿ, ಹಾರೆ, ಬುಟ್ಟಿ, ಟಿಲ್ಲರ್,
ಪಿಕ್ಕಾಸು, ಟ್ರ್ಯಾಕ್ಟರ್, ನೊಗ, ಪಂಪ್ ಸೆಟ್



## ವರ್ಗೀಕರಿಸುವ

❖ ಮಕ್ಕಳೆಲ್ಲರೂ ರಾಜಪ್ಪನ ಮನೆಯಿಂದ ಸಂತೋಷವಾಗಿ ಶಾಲೆಗೆ ಹಿಂತಿರುಗಿದರು. ಅಧ್ಯಾಪಕರು ತರಗತಿಗೆ ಬಂದರು "ಮಕ್ಕಳೇ ನಮ್ಮ ಊರಿನಲ್ಲಿ ರಾಜಪ್ಪನಂತೆ ಅನೇಕ ರೈತರು ಇದ್ದಾರೆ. ಅವರು ತರತರದ ಕೃಷಿ ಮಾಡಿ ಜೀವನ ನಡೆಸುತ್ತಿದ್ದಾರೆ. ಕೃಷಿಯೂ ಒಂದು ಒಳ್ಳೆಯ ಉದ್ಯೋಗ" ಎಂದು ಹೇಳಿದರು.

❖ ನಮ್ಮ ಊರಿನ ಪ್ರಧಾನ ಬೆಳೆಗಳು ಯಾವುವು?

| | | |
|---|---|---|
| 1. ತೆಂಗು | 4. ...................... | 7. ...................... |
| 2. ರಬ್ಬರ್ | 5. ...................... | 8. ...................... |
| 3. ...................... | 6. ...................... | 9. ...................... |

### ವರ್ಗೀಕರಿಸುವ

| ಆಹಾರ ಬೆಳೆಗಳು | ಇತರ ಬೆಳೆಗಳು |
|---|---|
| | |



# ನಾವು ರೈತರು

ರೈತರೆಲ್ಲ ಒಟ್ಟು ಸೇರಿ
ಹಲವು ಕೃಷಿಯ ಮಾಡುವ
ಭತ್ತ, ರಾಗಿ, ಗೋಧಿ, ಜೋಳ,
ಪೈರು, ಧಾನ್ಯ ಬೆಳೆಸುವ

ಬೆಂಡೆ ತೊಂಡೆ ಚೀನಿಕಾಯಿ
ಬೀಜಗಳನು ಬಿತ್ತುವ
ತೆಂಗು ಕಂಗು ಮಾವು ಹಲಸು
ನೆಟ್ಟು ನೀರನುಣಿಸುವ

ಹುಲ್ಲು ಕಳೆಯ ತೆಗೆದು ನಾವು
ಗಿಡಕೆ ಜೀವ ತುಂಬುವ
ಕೀಟ ಕಾಟ ಬಾರದಂತೆ
ಬೆಳೆಯ ನಾವು ಕಾಯುವ

ಫಸಲು ಕೊಯ್ದು ಸಂತೆಗೊಯ್ದು
ಬದುಕ ನಾವು ಕಟ್ಟುವ
ಕೃಷಿಯ ಕೆಲಸ ಹಿರಿದು ಎಂದು
ಹೆಮ್ಮೆಯಿಂದ ಹೇಳುವ

ಜನಕೆ ಅನ್ನ ಕೊಡುತ ನಾವು
ಹೊಟ್ಟೆ ಹಸಿವ ನೀಗುವ
ದೇಶ ಕಾಯ್ವ ಯೋಧರಂತೆ
ಜನರ ಸೇವೆ ಮಾಡುವ

- ಸಮಿತಿ ರಚನೆ



## ಉತ್ತರಿಸುವ

1. ರೈತರು ಯಾವ ಯಾವ ಬೆಳೆಗಳನ್ನು ಬೆಳೆಸುತ್ತಾರೆ?

2. ಯಾವ ಕೆಲಸ ಹಿರಿದು ಎಂದು ಹೇಳಬೇಕು?

3. ಜನರ ಹಸಿವನ್ನು ನೀಗಿಸುವವರು ಯಾರು?

## ಬರೆಯುವ

❖ 'ನಾವು ರೈತರು' ಎಂಬ ಪದ್ಯದಲ್ಲಿ ವಿವಿಧ ರೀತಿಯ ಬೆಳೆಗಳ ಕುರಿತು ತಿಳಿದುಕೊಂಡೆವಲ್ಲವೆ. ಆ ಪದ್ಯದಲ್ಲಿ ಬರುವ ವಿವಿಧ ಬೆಳೆಗಳನ್ನು ಈ ಪಟ್ಟಿಯಲ್ಲಿ ಸೇರಿಸಿರಿ. ಜೊತೆಗೆ ನಿಮಗೆ ತಿಳಿದಿರುವ ಬೇರೆ ಬೆಳೆಗಳನ್ನೂ ಸೇರಿಸಿರಿ.

| ಧಾನ್ಯಗಳು | ತರಕಾರಿಗಳು | ಇತರ ಬೆಳೆಗಳು |
|---|---|---|
| ಭತ್ತ | ಬೆಂಡೆ | ತೆಂಗು |

## ಬರೆಯುವ

**ಭತ್ತದಿಂದ ಅನ್ನದವರೆಗೆ...**










ನಾನು ಭತ್ತ... ನನ್ನನ್ನು ಸೆಗಣಿಯ ನೀರು ಹಾಕಿ ಮೊಳಕೆ ಬರಿಸಿದರು. ನಮ್ಮನ್ನೆಲ್ಲಾ ಕಿತ್ತು ನೇಜಿಯ ಕಟ್ಟ ಮಾಡಿದರು.

## ಬರೆಯುವ

### ಕೃಷಿ ಹಬ್ಬಗಳು

❖ ಭಾರತವು ಕೃಷಿ ಪ್ರಧಾನವಾದ ದೇಶ. ರೈತರು ಇಲ್ಲಿ ಕೃಷಿಗೆ ಸಂಬಂಧಿಸಿದ ವಿವಿಧ ಹಬ್ಬಗಳನ್ನು ಆಚರಿಸುತ್ತಾರೆ. ಕೆಳಗೆ ನೀಡಿರುವ ಚಿತ್ರಗಳನ್ನು ನೋಡಿರಿ. ಕೃಷಿಗೆ ಸಂಬಂಧಿಸಿದ ಹಬ್ಬಗಳ ಹೆಸರನ್ನು ಬರೆಯಿರಿ.









ಓಣಂ, ತೆನೆ ಹಬ್ಬ, ಕೆಡ್ಡಸ, ಹೊಸ ಅಕ್ಕಿ ಊಟ,
ಮನೆ ತುಂಬಿಸುವುದು, ಪೊಂಗಲ್

# ಗೊಲ್ಲನ ಕರುಣೆ

ಗೊಲ್ಲರ ಹಳ್ಳಿಯಲ್ಲಿ ಶ್ಯಾಮ ಮತ್ತು ಚಂದ್ರಕಾಂತ ಎಂಬ ಹೈನುಗಾರರಿದ್ದರು. ಶ್ಯಾಮ ಬಹಳ ದಯಾಪರನಾದ ಗೊಲ್ಲನಾಗಿದ್ದನು. ಅವನ ಬಳಿ ಹಲವಾರು ದನಗಳು, ಆಡುಗಳು, ಕುರಿಗಳು, ಕೋಳಿಗಳು ಇದ್ದವು. ಅವುಗಳನ್ನೆಲ್ಲಾ ಅವನು ಬಹಳ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದನು.



ಆದರೆ ಚಂದ್ರಕಾಂತ ಹಾಗಲ್ಲ.
ಅವನಿಗೆ ಹಣ ಮಾಡುವುದೊಂದೇ ಯೋಚನೆ.
ದನಗಳಿಗೆ ಸರಿಯಾಗಿ ಆಹಾರವನ್ನೂ ಕೊಡುತ್ತಿರಲಿಲ್ಲ.
ಹಾಲು ದೊರೆಯದಿರುವಾಗ ಚೆನ್ನಾಗಿ ಬಡಿದು ಹಿಂಸೆ ಕೊಡುತ್ತಿದ್ದನು.

ಒಂದು ದಿನ ಚಂದ್ರಕಾಂತನ ಬಂಗಾರಿ ದನಕ್ಕೆ ರೋಗ ಬಂತು. ಅದು ಬಹಳಷ್ಟು ಕೃಶವಾಯಿತು. ಇದರಿಂದಾಗಿ ದಿನದಿಂದ ದಿನಕ್ಕೆ ಅವನಿಗೆ ಸಿಗುವ ಹಾಲಿನ ಪ್ರಮಾಣ ಕಡಿಮೆ ಆಯಿತು. ರೊಚ್ಚಿಗೆದ್ದ ಚಂದ್ರಕಾಂತನು ಬಂಗಾರಿಗೆ ಚೆನ್ನಾಗಿ ಹೊಡೆದನು.






ಎಂದು ಬಂಗಾರಿ ದನವು ತೀರ್ಮಾನಿಸಿತು. ಅದು ಮನೆ ಬಿಟ್ಟು ಹೊರಟು ಹೋಯಿತು.

ಹಾಲು ಮಾರಿ ಮನೆಗೆ ಮರಳುತ್ತಿದ್ದ ಶ್ಯಾಮನಿಗೆ ದಾರಿಯಲ್ಲಿ ದನವೊಂದು ಕಂಗಾಲಾಗಿ ಬಿದ್ದುಕೊಂಡಿರುವುದು ಕಾಣಿಸಿತು.

ಅವನಿಗೆ ಅದರ ಮೇಲೆ ಕರುಣೆ ಉಕ್ಕಿತು. ಅವನು ಆ ದನವನ್ನು ಮನೆಗೆ ಕರೆದೊಯ್ದು ಆರೈಕೆ ಮಾಡಿದನು.

ಅದಕ್ಕೆ ಹೊಟ್ಟೆ ತುಂಬ ಅಕ್ಕಚ್ಚು, ಬೈಹುಲ್ಲು, ಹಿಂಡಿ ಮುಂತಾದ ಪೌಷ್ಟಿಕ ಆಹಾರವನ್ನು ಕೊಟ್ಟನು. ಬಳಿಕ ವೈದ್ಯರನ್ನು ಕರೆಸಿ ಔಷಧಿ ನೀಡಿದನು.



ದಿನಕಳೆದಂತೆ ಬಂಗಾರಿಯ ಆರೋಗ್ಯವು ಸುಧಾರಿಸಿತು.
ಅದು ದಷ್ಟ ಪುಷ್ಟವಾಗಿ ಬೆಳೆಯಿತು. ಕೆಲವು ತಿಂಗಳುಗಳಲ್ಲಿ ಆ ದನವು ಹೆಣ್ಣು ಕರುವೊಂದಕ್ಕೆ ಜನ್ಮ ನೀಡಿತು.
ಅದು ಮೊದಲಿನಂತೆ ಹಾಲು ಕೊಡಲು ಪ್ರಾರಂಭಿಸಿತು. ಶ್ಯಾಮನಿಗೆ ಖುಷಿಯೋ ಖುಷಿ.
ದನದ ಹಾಲನ್ನು ಮಾರುತ್ತಾ ಉತ್ತಮ ಜೀವನ ನಡೆಸತೊಡಗಿದನು.

*- ಸಮಿತಿ ರಚನೆ*






❖ **ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ.**

1. ಬಂಗಾರಿ ದನವನ್ನು ಹೆಚ್ಚು ಪ್ರೀತಿಯಿಂದ ಸಾಕಿದವರು ಯಾರು?

   A. ಚಂದ್ರಕಾಂತ B. ಶ್ಯಾಮ

   C. ಚಂದ್ರಕಾಂತ ಮತ್ತು ಶ್ಯಾಮ D. ವೈದ್ಯರು

   ...........................

2. ಜನನ - ಇದರ ಸಮಾನಾರ್ಥಕ ಪದವನ್ನು ಹೆಕ್ಕಿ ಬರೆಯಿರಿ.

   A. ಮರಣ B. ಹುಟ್ಟು

   C. ಜನರು D. ಹಿಂಸೆ

   ...........................

3. ಗುಂಪಿಗೆ ಸೇರದ ಪದವನ್ನು ಹುಡುಕಿ ಬರೆಯಿರಿ.

   A. ಪ್ರೀತಿ B. ಕರುಣೆ

   C. ಮಮತೆ D. ದ್ವೇಷ

   ...........................

4. ದನ ಸೇವಿಸದ ಆಹಾರ ಯಾವುದು?

   A. ಅಕ್ಕಚ್ಚು B. ಬೈಹುಲ್ಲು C. ಮಾಂಸ D. ಹಿಂಡಿ

   ...........................

5. ಅಹಿಂಸೆ ಈ ಪದದ ವಿರೋಧಾರ್ಥ ಪದ ಯಾವುದು?

   A. ಪ್ರೀತಿ B. ಶಾಂತಿ C. ಹಿಂಸೆ D. ಸಿಟ್ಟು

   ...........................

## ಬರೆಯುವ ಸಂಭಾಷಣೆ

ಶ್ಯಾಮನ ಮನೆಯಲ್ಲಿ ತನ್ನ ದನ ಇರುವುದು ಚಂದ್ರಕಾಂತನಿಗೆ ತಿಳಿಯಿತು. ಅವನು ಶ್ಯಾಮನ ಮನೆಗೆ ಬಂದನು. ಅವರೊಳಗೆ ನಡೆದ ಸಂಭಾಷಣೆಯನ್ನು ಮುಂದುವರಿಸಿ ಬರೆಯಿರಿ.

ಚಂದ್ರಕಾಂತ : ಶ್ಯಾಮ... ಶ್ಯಾಮ..

ಶ್ಯಾಮ : ಏನು ವಿಷಯ?

ಚಂದ್ರಕಾಂತ : ..............................................................................................

ಶ್ಯಾಮ : ನಿನ್ನ ದನವೇ? ಇದು ನನಗೆ ....................................................

ಚಂದ್ರಕಾಂತ : ದಾರಿಯಲ್ಲಿ ಸಿಕ್ಕಿದ್ದೇ? ದಾರಿ ತಪ್ಪಿ ಬಂದಿರಬಹುದು. ಅದನ್ನು ನನಗೆ ಹಿಂತಿರುಗಿಸು.

ಶ್ಯಾಮ : ............................. ನಾನು ಅದನ್ನು ಪ್ರೀತಿಯಿಂದ ಸಾಕಿದ್ದೇನೆ. ದನ ನಿನ್ನ ಜೊತೆ ಬರುವುದಾದರೆ ಕರೆದುಕೊಂಡು ಹೋಗು.

ಚಂದ್ರಕಾಂತ : ..............................................................................................

ಶ್ಯಾಮ : ನೋಡು, ನೀನು ಕರೆದಾಗ ದನ ಬರಲಿಲ್ಲ. ಅದಕ್ಕೆ ನಿನ್ನಲ್ಲಿ ಪ್ರೀತಿ ಇಲ್ಲ. ........................................................

ಚಂದ್ರಕಾಂತ : ಸರಿ, ನನಗೆ ನನ್ನ ತಪ್ಪಿನ ಅರಿವಾಯಿತು. ಇನ್ನು ದನವನ್ನು ನೀನೇ ಚೆನ್ನಾಗಿ ಸಾಕು.



## ಗೆರೆ ಎಳೆದು ಜೋಡಿಸಿರಿ

❖ **ಕೆಳಗಿನ ವ್ಯಕ್ತಿಗಳು ನಿರ್ವಹಿಸುವ ಕೆಲಸವನ್ನು ಆವರಣದಲ್ಲಿ ಬರೆಯಿರಿ. ಅವರು ಕೆಲಸ ಮಾಡುವ ಸ್ಥಳವನ್ನು ಗೆರೆ ಎಳೆದು ಜೋಡಿಸಿರಿ.**



ಚಿಕಿತ್ಸೆ ನೀಡುವುದು

- ಶಾಲೆ
- ಆಸ್ಪತ್ರೆ
- ಹೊಲ
- ಪೊಲೀಸ್ ಠಾಣೆ
- ಅಂಚೆ ಕಚೇರಿ










2
ಭುವಿಯ
ಗೆಳೆಯರು

# ಕರಡಿಯ ಉಪಾಯ

ಹೊನ್ನಮಲೆ ಒಂದು ದಟ್ಟವಾದ ಕಾಡು. ಆ ಕಾಡಿನಲ್ಲಿ ಆನೆ, ಜಿಂಕೆ, ಕಾಗೆ, ಕರಡಿ, ಮಂಗ, ಮೊಲ, ನರಿ ಇತ್ಯಾದಿ ಪ್ರಾಣಿ ಪಕ್ಷಿಗಳು ವಾಸವಾಗಿದ್ದವು. ಆ ಕಾಡಿನಲ್ಲಿ ಶೇರು ಹುಲಿಯು ರಾಜನಾಗಿತ್ತು. ಕಾಡಿನಲ್ಲಿದ್ದ ಸಣ್ಣ ಪುಟ್ಟ ಪ್ರಾಣಿಗಳನ್ನು ಕೊಂದು ತಿನ್ನುವುದು ಶೇರುವಿನ ಅಭ್ಯಾಸವಾಗಿತ್ತು.





ಇದರಿಂದಾಗಿ ಕಾಡಿನ ಬಹುತೇಕ ಪ್ರಾಣಿಗಳು ಹೆದರಿಕೆಯಿಂದ ಕಾಲ ಕಳೆಯುತ್ತಿದ್ದವು. ಆದರೆ ಶೇರುವಿಗೆ ಜಂಬು ಕರಡಿಯೆಂದರೆ ಬಹಳ ಹೆದರಿಕೆ. ಆದುದರಿಂದ ಸಣ್ಣ ಪ್ರಾಣಿಗಳು ಜಂಬು ಕರಡಿಯ ಬಳಿ ಬಂದು ತಮ್ಮ ಸಂಕಟವನ್ನು ಹೇಳಿಕೊಂಡುವು. ತಾವೆಲ್ಲರೂ ಸಭೆ ಸೇರಿ ಇದಕ್ಕೊಂದು ಪರಿಹಾರವನ್ನು ಕಂಡುಕೊಳ್ಳೋಣ ಎಂದು ತೀರ್ಮಾನಿಸಿದವು. “ಸಭೆಗೆ ಶೇರುವನ್ನು ಆಮಂತ್ರಿಸಬೇಕು” ಎಂದು ಚಿಂಟು ಮೊಲ ಹೇಳಿತು.

ಅಂದು ಕಾಡಿನಲ್ಲಿ ಪ್ರಾಣಿಗಳ ಸಭೆ. ಎಲ್ಲರೂ ಸಮಯಕ್ಕೆ ಸರಿಯಾಗಿ ಸಭೆಗೆ ಬಂದು ಸೇರಿದರು. “ಶೇರು, ನೀನು ಕಾಡಿನ ರಾಜನೇ ಸರಿ. ಆದರೆ ಎಲ್ಲಾ ಪ್ರಾಣಿಗಳನ್ನು ಸುಮ್ಮನೆ ಕೊಲ್ಲುವುದು ಸರಿಯಲ್ಲ” ಜಂಬು ಕರಡಿ ಹೇಳಿತು. “ಇದು ನನ್ನ ಕಾಡು. ನನಗೆ ಇಲ್ಲಿ ಏನು ಬೇಕಾದರೂ ಮಾಡುವ ಅಧಿಕಾರವಿದೆ. ಸುಮ್ಮನಿರದಿದ್ದರೆ ಎಲ್ಲರನ್ನೂ ಕೊಂದು ತಿನ್ನುತ್ತೇನೆ” ಶೇರು ಗರ್ಜಿಸಿತು. ಭಯಗೊಂಡ ಪ್ರಾಣಿಗಳೆಲ್ಲವೂ ಅಲ್ಲಿಂದ ಪಾರಾದವು.



ಶೇರುವಿನ ಸೊಕ್ಕನ್ನು ಮುರಿಯಬೇಕು ಎಂದು ಜಂಬು ಕರಡಿ ತೀರ್ಮಾನಿಸಿತು. ಮತ್ತೊಂದು ದಿನ ಜಂಬು ಕರಡಿಯು ಕಾಡಿನ ಪ್ರಾಣಿಗಳ ಸಭೆ ಕರೆಯಿತು. “ಶೇರುವಿನ ಅಹಂಕಾರವನ್ನು ಮುರಿಯಲು ನಾನೊಂದು ಉಪಾಯವನ್ನು ಹೇಳುತ್ತೇನೆ” ಜಂಬು ಕರಡಿಯು ಹೇಳಿತು.



ಎಲ್ಲಾ ಪ್ರಾಣಿಗಳಿಗೂ ಉಪಾಯ ಏನೆಂದು ತಿಳಿಯುವ ಕುತೂಹಲ. "ಶೇರು ದಿನನಿತ್ಯ ಹೋಗುವ ದಾರಿಯಲ್ಲಿ ದೊಡ್ಡದಾದ ಹೊಂಡವನ್ನು ತೋಡಿ, ಅದರ ಮೇಲ್ಭಾಗವನ್ನು ಸೊಪ್ಪು ಕಡ್ಡಿಗಳಿಂದ ಮುಚ್ಚಬೇಕು. ಆ ದಾರಿಯಾಗಿ ಬರುವ ಶೇರುವನ್ನು ಹೊಂಡದೊಳಗೆ ಬೀಳಿಸಿ ಅದರ ಅಹಂಕಾರವನ್ನು ಮುರಿಯಬೇಕು. ಆದರೆ ಶೇರುವಿಗೆ ಯಾವುದೇ ಸಂಶಯ ಬರಬಾರದು." ಜಂಬು ಕರಡಿಯು ಸಲಹೆ ನೀಡಿತು. ಹಗಲು ಶೇರು ಹುಲಿ ನಿದ್ದೆ ಮಾಡುವ ಹೊತ್ತಿಗೆ ಎಲ್ಲರೂ ಸೇರಿ ಹೊಂಡ ತೋಡಿ ಅದರ ಮೇಲ್ಭಾಗವನ್ನು ಸೊಪ್ಪು ಕಡ್ಡಿಗಳಿಂದ ಮುಚ್ಚಿದರು.





ರಾತ್ರಿಯಾಯಿತು. ಶೇರು ಬೇಟೆಯಾಡಲು ಹೊರಟಿತು. ಸ್ವಲ್ಪ ಮುಂದೆ ನಡೆದದ್ದೇ ತಡ "ಅಯ್ಯೋ... ನಾನು ಸತ್ತೆ!" ಎನ್ನುವ ಬೊಬ್ಬೆ ಕೇಳಿಸಿತು.

ಹೊಂಡದಲ್ಲಿ ಬಿದ್ದ ಶೇರುವಿನ ಬೊಬ್ಬೆ ಕೇಳಿ ಎಲ್ಲಾ ಪ್ರಾಣಿಗಳೂ ಬಂದು ಸೇರಿದವು. "ನಿನ್ನ ತಪ್ಪಿಗೆ ಇದೇ ಶಿಕ್ಷೆ. ನಿನ್ನನ್ನು ರಕ್ಷಿಸಲು ಯಾರೂ ಬರುವುದಿಲ್ಲ" ಜಂಬು ಕರಡಿ ಹೇಳಿತು. ಎಲ್ಲಾ ಪ್ರಾಣಿಗಳೂ ಶೇರುವನ್ನು ಅಲ್ಲಿಯೇ ಬಿಟ್ಟು ಹಿಂತಿರುಗಿದುವು.

*- ಸಮಿತಿ ರಚನೆ*






❖ **ಕಥೆಯ ಭಾಗವನ್ನು ಕ್ರಮೀಕರಿಸಿ ಬರೆಯಿರಿ.**

- ಅಂದು ಕಾಡಿನಲ್ಲಿ ಪ್ರಾಣಿಗಳ ಸಭೆ.
- ಎಲ್ಲಾ ಪ್ರಾಣಿಗಳೂ ಶೇರುವನ್ನು ಅಲ್ಲಿಯೇ ಬಿಟ್ಟು ಹಿಂತಿರುಗಿದವು.
- ದಾರಿಯಲ್ಲಿ ದೊಡ್ಡದಾದ ಒಂದು ಹೊಂಡವನ್ನು ತೋಡಿದರು.
- ಕಾಡಿನ ಸಣ್ಣಪುಟ್ಟ ಪ್ರಾಣಿಗಳನ್ನು ಕೊಂದು ತಿನ್ನುವುದು ಶೇರುವಿನ ಅಭ್ಯಾಸವಾಗಿತ್ತು.
- ಹೊನ್ನಮಲೆ ಒಂದು ದಟ್ಟವಾದ ಕಾಡು.
- ಶೇರುವಿನ ಅಹಂಕಾರವನ್ನು ಮುರಿಯಲು ಜಂಬು ಕರಡಿ ಒಂದು ಉಪಾಯವನ್ನು ಹೇಳಿತು.




❖ **ಪ್ರಶ್ನೆಗಳಿಗೆ ಉತ್ತರಿಸಿರಿ.**

- ಹೊನ್ನಮಲೆ ಕಾಡಿನ ರಾಜ ಯಾರು?

- ಕಾಡಿನ ಸಣ್ಣ ಪ್ರಾಣಿಗಳು ಯಾರಲ್ಲಿ ಸಂಕಟವನ್ನು ಹೇಳಿಕೊಂಡವು?

- "ಎಲ್ಲ ಪ್ರಾಣಿಗಳನ್ನು ಸುಮ್ಮನೆ ಕೊಲ್ಲುವುದು ಸರಿಯಲ್ಲ" ಈ ಮಾತನ್ನು ಯಾರು ಹೇಳಿದರು?

- ಶೇರುವಿಗೆ ಸಿಕ್ಕಿದ ಶಿಕ್ಷೆ ಏನು?

❖ **ಕೆಳಗೆ ಸೂಚಿಸಿದ ಪದಗಳು ಇರುವ ವಾಕ್ಯಗಳನ್ನು ಪಾಠದಿಂದ ಆರಿಸಿ ಬರೆಯಿರಿ.**

**ಆಮಂತ್ರಿಸು** :- ____________________

**ಶಿಕ್ಷೆ** :- ____________________

**ದಿನನಿತ್ಯ** :- ____________________

**ಸಣ್ಣಪುಟ್ಟ** :- ____________________




❖ **ಅಕ್ಷರಗಳನ್ನು ಕ್ರಮೀಕರಿಸಿ ಪದ ರಚಿಸಿರಿ.**

**ರಿಹೆದಕೆ** -

**ಅರಧಿಕಾ** -

**ಅಕಾಹಂರ** -

**ರಟಿಹೊತು** -

**ಹಲತೂಕು** -

❖ **ಸರಿಯಾದ ಪದವನ್ನು ಪಾಠದಿಂದ ಆರಿಸಿ ಭರ್ತಿಮಾಡಿರಿ.**

1. ಶೇರುವಿಗೆ ಜಂಭು ಕರಡಿಯೆಂದರೆ ಬಹಳ ................. .
2. ಶೇರು ಬೇಟೆಯಾಡಲು ............ .
3. ಅಂದು ಕಾಡಿನಲ್ಲಿ ............ ಸಭೆ.
4. ಹೊನ್ನಮಲೆ ಒಂದು ............ಕಾಡು

❖ **ಪೂರ್ತಿಗೊಳಿಸಿರಿ.**

| | | | |
|---|---|---|---|
| ಆಡು | ಕಾಡು | ........................ | ........................ |
| ಕೊಡೆ | ತೊಡೆ | ........................ | ........................ |
| ದಡ | ಬಿಡ | ........................ | ........................ |
| ಕಿಡಿ | ಹುಡಿ | ........................ | ........................ |
| ಡೋಲು | ಆಡೋಣ | ........................ | ........................ |
| ಡಂಗುರ | ಆಡಂಭರ | ........................ | ........................ |
| ಡಾಮರು | ಡಾಲಿಯಾ | ........................ | ........................ |



## ಬರೆಯುವ

❖ ಕೋಣೆಯಲ್ಲಿರುವ ಕಾಡು ಪ್ರಾಣಿಗಳ ಹೆಸರು ಹುಡುಕಿ ಬರೆಯಿರಿ.

| | | | | | | | |
|---|---|---|---|---|---|---|---|
| ಸ | ಜಿಂ | ಹಾ | ತೋ | ಕಾ | ಡು | ಕೋ | ಣ |
| ನ | ಕೆ | ವು | ಳ | ಹಂ | ದಿ | ಣ | ಸಿಂ |
| ಕಾ | ಗೆ | ಹು | ಲಿ | ಆ | ಮಂ | ಗ | ಹ |
| ಮಾ | ಆ | ನೆ | ನ | ಇ | ಚಿ | ರ | ತೆ |
| ವ | ಮೊ | ಲ | ರಿ | ಲಿ | ಕ | ರ | ಡಿ |

# ನೀನು ಬಾರೆ ನವಿಲೆ



ನವಿಲೆ ನೀನು ಬಾರೆ ಇಲ್ಲಿ
ಎಷ್ಟು ಸುಂದರ
ಗರಿಯ ಬಣ್ಣ ಅದರ ಕಣ್ಣ
ನೋಡುವಾತುರ

ಉದ್ದ ಕತ್ತು ತಲೆಯ ಜುಟ್ಟು
ಎಂಥ ಸೊಬಗದು
ಗರಿಯ ಬಿಚ್ಚಿ ಕುಣಿಯುವಾಗ
ಕಣ್ಣು ಸಾಲದು

ನೀನು ಬಾರೆ ಇಲ್ಲಿ ನವಿಲೆ
ಏನು ಹೇಳುವೆ
ನಿನ್ನ ಕುಣಿತ ಚಿತ್ರ ತೆಗೆದು
ನಾನು ನಲಿಯುವೆ



ನಿನ್ನ ನಾಟ್ಯ ಕಂಡು ಜನರ
ಹಿಂಡು ನಲಿವುದು
ನೀನು ನಾಟ್ಯ ರಾಜ ಎಂದು
ಜಗವೆ ನುಡಿವುದು

- ತಮ್ಮಣ್ಣ ಬೀಗಾರ




## ❖ ಪೂರ್ತಿಗೊಳಿಸಿರಿ.

- ಸುಂದ............
- ............ಣಿತ
- ನೋಡು............ತುರ
- ನಾ...........ರಾಜ
- ನ............ವುದು

## ❖ ಸಮಾನ ಅರ್ಥ ಕೊಡುವ ಪದಗಳನ್ನು ಕಂಡುಹಿಡಿದು ಬರೆಯಿರಿ.

- ಸುಂದರ - ______________
- ಸೊಬಗು - ______________
- ಹಿಂಡು - ______________

## ❖ ಪದ ಬಿಡಿಸಿ ಬರೆಯಿರಿ.

- ನೋಡುವಾತುರ - ______________
- ಮುಚ್ಚಿಟ್ಟರು - ______________
- ಅಭ್ಯಾಸವಾಗಿತ್ತು - ______________

## ❖ ಮಾದರಿಯಂತೆ ಬರೆಯಿರಿ.

- ಕುಣಿವುದು - ಕುಣಿಯುವುದು
- ನಲಿವುದು - ______________
- ನುಡಿವುದು - ______________
- ...................... - ______________
- ...................... - ______________

## ಬರೆಯುವ

❖ **ಪದ್ಯವನ್ನು ಓದಿದಿರಲ್ಲವೇ?**

ನವಿಲಿನ ಚಿತ್ರ ಪೂರ್ತಿಗೊಳಿಸಿ ಬಣ್ಣ ಹಚ್ಚಿರಿ. ನವಿಲಿನ ಬಗ್ಗೆ ಬರೆಯಿರಿ.



______________________________

______________________________

______________________________

______________________________

❖ **ನಿಮ್ಮ ಸುತ್ತಮುತ್ತಲು ಕಾಣುವ ಹಕ್ಕಿಗಳ ಪಟ್ಟಿ ಮಾಡಿರಿ.**

ಕಾಗೆ, ಮೈನಾ,

# ಬರೆಯುವ

❖ ಹಕ್ಕಿಯ ಶರೀರದ ಬೇರೆ ಬೇರೆ ಭಾಗಗಳ ಚಿತ್ರವನ್ನು ಗುರುತಿಸಿ ಬರೆಯಿರಿ.



❖ ಇದು ಯಾವ ಹಕ್ಕಿಯ ಶರೀರ ಭಾಗವಾಗಿದೆ?







## ಬರೆಯುವ



1. ಇದು ಯಾವ ಹಕ್ಕಿ?

2. ಇದು ಎಲ್ಲಿ ಕಾಣಸಿಗುತ್ತದೆ?

3. ಇದರ ಬಣ್ಣ ಯಾವುದು?

4. ಕಾಲುಗಳು ಹೇಗಿವೆ?

❖ **ಈ ಹಕ್ಕಿಯ ವಿಶೇಷತೆಗಳನ್ನು ಬರೆಯಿರಿ.**

❖ **ಕೆಳಗೆ ಕೊಟ್ಟಿರುವ ಹಕ್ಕಿಯ ವಿಶೇಷತೆಗಳನ್ನು ಬರೆಯಿರಿ.**



❖ **ಒಗಟಿಗೆ ಉತ್ತರಿಸಿರಿ.**

ನನ್ನ ಮೈಬಣ್ಣ ಹಸಿರು.
ನನಗೆ ಕೆಂಪು ಕೊಕ್ಕಿದೆ.
ನನಗೆ ಹಣ್ಣುಗಳೆಂದರೆ ತುಂಬಾ ಇಷ್ಟ.
ನಾನು ಯಾರು?

ನನ್ನ ಮೈಯೆಲ್ಲ ಕಪ್ಪು. ನಾನು ನಿಮ್ಮ ಪರಿಸರದಲ್ಲೇ ಇರುತ್ತೇನೆ.
ಸುತ್ತಮುತ್ತಲೂ ಸಿಗುವ ಆಹಾರ ಹೆಕ್ಕಿ ತಿನ್ನುತ್ತೇನೆ.
ಮರದಲ್ಲಿ ನನ್ನ ವಾಸ.
ನಾನು ಯಾರು?

ನಾನು ಸಣ್ಣ ಹಕ್ಕಿ.
ಹೂಗಳಿಂದ ಜೇನನ್ನು ಹೀರುತ್ತೇನೆ.
ಸಣ್ಣ ಚೂಪಾದ ಕೊಕ್ಕಿದೆ.
ನಾನು ಯಾರು?

ನನ್ನ ಬಣ್ಣ ನೀಲಿ.
ನಾನು ಹೊಳೆಯ ಬದಿಯಲ್ಲಿ ಇರುತ್ತೇನೆ.
ನನಗೆ ಮೀನುಗಳೆಂದರೆ ತುಂಬಾ ಇಷ್ಟ.
ನಾನು ಯಾರು?

ನನ್ನ ಕುತ್ತಿಗೆ ಉದ್ದ.
ನನ್ನ ಪಾದ ಮತ್ತು ಕೊಕ್ಕು ಅಗಲವಾಗಿದೆ.
ನಾನು ನೀರಿನಲ್ಲಿ ಈಜುತ್ತೇನೆ.
ನಾನು ಯಾರು?

# ಸಮುದ್ರದ ಅರಮನೆ

ಚಿನ್ನಿ ಮೀನಿಗೆ ಖುಷಿಯೋ ಖುಷಿ. ಮಿರಿ ಮಿರಿ ಮಿನುಗುವ ಉಡುಪು, ತನ್ನ ಈಜು ರೆಕ್ಕೆಗಳಿಗೆ ಪುಟ್ಟ ಪುಟ್ಟ ಗಾಜಿನ ಬಳೆಗಳನ್ನು ತೊಟ್ಟುಕೊಂಡು ಅವಳು ಹೊರಟು ನಿಂತಿದ್ದಳು. ಆದರೆ ಇನ್ನೂ ಗೆಳೆಯರು ಬರದಿರುವುದನ್ನು ಕಂಡು ಅವಳಿಗೆ ಸಿಟ್ಟು ಬರುತ್ತಿತ್ತು. ಈ ಆಮೆಯಣ್ಣ ತೆವಳಿ ತೆವಳಿ ನೆಲದಿಂದ ನೀರಿಗೆ ಇಳಿಯುವಾಗಲೇ ತಡ ಆಗಬಹುದು. ಚಿನ್ನಿ ತನ್ನಷ್ಟಕ್ಕೆ ಗೊಣಗಿಕೊಂಡಳು. ಅಷ್ಟರಲ್ಲಿ ಅವಳ ಗೆಳೆಯರಾದ ಕಪ್ಪೆ, ಏಡಿ, ಮತ್ತು ಸಿಗಡಿ ಅವಸರ ಅವಸರವಾಗಿ ಚಿನ್ನಿಯ ಬಳಿ ಬಂದವು. “ಚಿನ್ನಿ ನೀನು ಇವತ್ತು ತುಂಬಾ ಚೆನ್ನಾಗಿ ಕಾಣಿಸುತ್ತಿದ್ದೀಯ. ಆಗಲೇ ಹೊರಟು ನಿಂತಿದ್ದೀಯಾ?” ತನ್ನ ಉದ್ದ ಮೀಸೆಯನ್ನು ತಿರುಗಿಸುತ್ತಾ ಸಿಗಡಿಯಣ್ಣ ಕೇಳಿದ. ನಿಮಗೆ ಯಾರಿಗೂ ಹೇಳಿದ ಸಮಯಕ್ಕೆ ಬರಲಾಗುವುದಿಲ್ಲ. ಈಗಾಗಲೇ ತಡವಾಯಿತು. ಮತ್ಸ್ಯಕನ್ನಿಕೆಯ ಅರಮನೆಯ ಬಾಗಿಲು ಮುಚ್ಚಿದರೆ ಮತ್ತೆ ಒಳ ಹೋಗಲು ಬಿಡುವುದಿಲ್ಲ. ಚಿನ್ನಿ ಗೆಳೆಯರನ್ನು ನೋಡುತ್ತಾ ಹೇಳಿದಳು. ಆ ಸಮಯಕ್ಕೆ ಸರಿಯಾಗಿ ಆಮೆಯೂ ಬೇಗ ಬೇಗನೇ ಈಜುತ್ತಾ ಬರುತ್ತಿರುವುದು ಕಂಡಿತು.



“ಅವನನ್ನು ನೋಡಿ. ನೆಲದಲ್ಲಿ ಮೆಲ್ಲ ಮೆಲ್ಲನೆ ತೆವಳುವ ಆಮೆಯಣ್ಣ ಈಗ ವೇಗವಾಗಿ ಈಜುತ್ತಾ ಬರುತ್ತಿದ್ದಾನೆ.” ಏಡಿ ನಗುತ್ತಾ ಹೇಳಿತು. “ಬೇಗ ಬಾ ಆಮೆಯಣ್ಣ ಈಗಲೇ ತಡ ಆಯಿತು.” ಎನ್ನುತ್ತಾ ಎಲ್ಲರೂ ಸಮುದ್ರದ ಆಳದಲ್ಲಿರುವ ಮತ್ಸ್ಯಕನ್ನಿಕೆಯ ಅರಮನೆಯ ಕಡೆಗೆ ಈಜತೊಡಗಿದರು. ಮತ್ಸ್ಯಕನ್ನಿಕೆಯ ಅರಮನೆಯು ಸಮುದ್ರದ ಅಡಿಭಾಗದಲ್ಲಿ ಬಹಳ ಆಳದಲ್ಲಿತ್ತು. ಎಲ್ಲರೂ ವೇಗವಾಗಿ ಈಜುತ್ತಾ ಅರಮನೆಗೆ ತಲುಪಿದರು. ಅರಮನೆಯನ್ನು ವಿವಿಧ ಜಲೀಯ ಸಸ್ಯಗಳಿಂದ, ಮುತ್ತು, ರತ್ನ, ಹವಳಗಳಿಂದ ಮನೋಹರವಾಗಿ ಸಿಂಗರಿಸಿದ್ದರು. ಇಂದು ಮತ್ಸ್ಯಕನ್ನಿಕೆಯ ಹುಟ್ಟು ಹಬ್ಬ. ಎಲ್ಲಾ ಜಲಚರಗಳಿಗೂ ಆಹ್ವಾನ ನೀಡಲಾಗಿತ್ತು.





ದೊಡ್ಡದಾದ ತಿಮಿಂಗಿಲದ ಬೆನ್ನ ಮೇಲಿದ್ದ ಸುಂದರವಾದ ವೇದಿಕೆಯಲ್ಲಿ ಮತ್ಸ್ಯಕನ್ನಿಕೆ ಬಣ್ಣ ಬಣ್ಣದ ಉಡುಪು ಧರಿಸಿ ರಾಜಕುಮಾರಿಯಂತೆ ಕುಳಿತಿದ್ದಳು. ಎಲ್ಲರೂ ಅವಳಿಗೆ ವಿವಿಧ ಉಡುಗೊರೆಗಳನ್ನು ನೀಡಿ ಶುಭ ಹಾರೈಸಿದರು. ಚಿನ್ನಿ ಮೀನು, ಚಿಪ್ಪು ಮೀನು ಮತ್ತು ಗೆಳೆಯರು ತಯಾರಿಸಿದ ಅಂದವಾದ ಮುತ್ತಿನ ಹಾರವನ್ನು ಅವಳಿಗೆ ಉಡುಗೊರೆಯಾಗಿ ನೀಡಿದರು. ಮತ್ಸ್ಯಕನ್ನಿಕೆಗೆ ಅದು ತುಂಬಾ ಇಷ್ಟವಾಯಿತು. ಅದನ್ನು ಕೊರಳಲ್ಲಿ ಧರಿಸಿ ನೃತ್ಯ ಮಾಡತೊಡಗಿದಳು. ಚಿನ್ನಿ ಮತ್ತು ಗೆಳೆಯರೂ ಅವಳ ಜೊತೆಗೆ ನೃತ್ಯ ಮಾಡಿದರು. ಕಡಲು ಕುದುರೆ ಜಲತರಂಗ ವಾದ್ಯ ನುಡಿಸಿತು. ಎಲ್ಲರೂ ಸಂತೋಷದಿಂದ ಸಂಗೀತ ಕೇಳುತ್ತಾ ನೃತ್ಯ ಮಾಡಿದರು.



ಅಷ್ಟರಲ್ಲಿ “ಅಯ್ಯೋ.... ನನ್ನ ಮುತ್ತಿನ ಮಾಲೆ.. ನನ್ನ ಮುತ್ತಿನ ಮಾಲೆ ಕಾಣಿಸುತ್ತಿಲ್ಲ... ಮತ್ಸ್ಯಕನ್ನಿಕೆ ಜೋರಾಗಿ ಕೂಗುತ್ತಾ ಹೇಳಿದಳು. ಎಲ್ಲರೂ ಬಹಳ ಗಾಬರಿಯಾದರು. ಚಿನ್ನಿ ಮತ್ತು ಗೆಳೆಯರು ಉಡುಗೊರೆಯಾಗಿ ನೀಡಿದ ಮುತ್ತಿನ ಹಾರ ಕಾಣೆಯಾಗಿತ್ತು. ಮತ್ಸ್ಯಕನ್ನಿಕೆಗೆ ತುಂಬಾ ಬೇಸರವಾಯಿತು. ಅವಳು ಜೋರಾಗಿ ಅಳತೊಡಗಿದಳು. ಎಲ್ಲರೂ ಹುಡುಕಲು ಆರಂಭಿಸಿದರು.

ದೂರದಲ್ಲಿ ಒಕ್ಟೋಪಸ್ ಮೀನೊಂದು ಮುತ್ತಿನ ಹಾರವನ್ನು ಕದ್ದು ಕೊಂಡು ಹೋಗುತ್ತಿರುವುದನ್ನು ಆಮೆಯಣ್ಣ ನೋಡಿತು...

*- ಸಮಿತಿ ರಚನೆ*



## ಬರೆಯುವ

❖ ಒಕ್ಟೋಪಸ್ ಮುತ್ತಿನ ಹಾರವನ್ನು ಕದ್ದುಕೊಂಡು ಹೋಗುವುದನ್ನು ಆಮೆಯಣ್ಣ ನೋಡಿತು. ಮುಂದೆ ಏನಾಗಿರಬಹುದು?

ಚಿತ್ರಗಳನ್ನು ನೋಡಿ ಕಥೆ ಪೂರ್ತಿಗೊಳಿಸಿರಿ.



## ಉತ್ತರಿಸುವ

❖ **ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.**

1. ಚಿನ್ನಿ ಮೀನಿನ ಗೆಳೆಯರು ಯಾರು?

2. ಚಿನ್ನಿ ಮತ್ತು ಗೆಳೆಯರು ಮತ್ಸ್ಯಕನ್ನಿಕೆಯ ಅರಮನೆಗೆ ಹೊರಟದ್ದು ಯಾಕೆ?

   ಎ. ಅರಮನೆಯ ಚಂದ ನೋಡಲು

   ಬಿ. ಮತ್ಸ್ಯಕನ್ನಿಕೆಗೆ ಹೊಡೆಯಲು

   ಸಿ. ಮತ್ಸ್ಯಕನ್ನಿಕೆಯ ಹುಟ್ಟುಹಬ್ಬಕ್ಕೆ

   ಡಿ. ಮತ್ಸ್ಯ ಕನ್ನಿಕೆಯಿಂದ ಮುತ್ತಿನ ಮಾಲೆ ಪಡೆಯಲು

3. ಮತ್ಸ್ಯಕನ್ನಿಕೆಯ ಅರಮನೆಯನ್ನು ಯಾವುದರಿಂದ ಸಿಂಗರಿಸಲಾಗಿತ್ತು?

4. ಜಲತರಂಗ ನುಡಿಸಿದವರು ಯಾರು?

5. ಮುತ್ತಿನ ಹಾರವನ್ನು ಕದ್ದುಕೊಂಡು ಹೋದದ್ದು ಯಾರು?

## ಬರೆಯುವ

❖ ಮೀನುಗಳ ಹೆಸರನ್ನು ಹುಡುಕಿ ಬರೆಯಿರಿ.






❖ ಪಾಠಭಾಗದಲ್ಲಿ ಬಂದ ಪದಗಳನ್ನು ಹುಡುಕಿ ಬರೆಯಿರಿ.





# 3 ಎಲ್ಲರೊಳಗೊಂದಾಗು

# ಸ್ವಾತಂತ್ರ್ಯದ ಬೆಳಗು

ಆಗಸ್ಟ್ 15ರಂದು ಕಿರಣನ ಶಾಲೆಯಲ್ಲಿ ಸ್ವಾತಂತ್ರ್ಯೋತ್ಸವ ನಡೆಯುವುದಕ್ಕಿದೆ. ಮಕ್ಕಳೆಲ್ಲಾ ವಿವಿಧ ಸಿದ್ಧತೆಗಳಲ್ಲಿ ತೊಡಗಿದ್ದರು. ಗುರುಗಳು ಅವರಿಗೆ ಮಾರ್ಗದರ್ಶನ ನೀಡುತ್ತಿದ್ದರು.

ಕಿರಣ : ರಹೀಂ, ಅಲ್ಲಿ ನೋಡು. ಹಾರ ಹಾಕಿರುವ ಗಾಂಧೀಜಿಯ ಫೋಟೊ ಎಷ್ಟು ಚೆನ್ನಾಗಿದೆ!

ಸುಮಾ : ಹೌದು, ಗಾಂಧೀಜಿಯವರು ನಮ್ಮ ರಾಷ್ಟ್ರಪಿತ ಅಲ್ಲವೇ. ಅದಕ್ಕಾಗಿಯೇ ಅಷ್ಟು ಒಳ್ಳೆಯ ಹಾರದಿಂದ ಅಲಂಕರಿಸಿದ್ದಾರೆ.

ರಹೀಂ : 'ರಾಷ್ಟ್ರಪಿತ' ಎಂದು ಅವರನ್ನು ಯಾಕೆ ಕರೆಯುತ್ತಾರೆ. ಅವರು ಅಂತಹ ಕೆಲಸ ಏನು ಮಾಡಿದರು?



ರವಿ : ಅವರು ನಮ್ಮ ದೇಶಕ್ಕೆ ಸ್ವಾತಂತ್ರ್ಯ ಕೊಡಿಸಿದರಂತೆ. ಅದಕ್ಕೆ ಅವರನ್ನು ರಾಷ್ಟ್ರಪಿತ ಎಂದು ಕರೆಯುವುದು ಎಂದು ನನ್ನ ತಾತ ಹೇಳುತ್ತಿದ್ದರು.

ಗುರುಗಳು : ಮಕ್ಕಳೇ, ನಾಳಿನ ಸಿದ್ಧತೆ ಆಯಿತೇ?

ಡೇವಿಡ್ : ಆಯಿತು ಗುರುಗಳೇ, ಹಾಗೆಯೇ ನಮಗೆ ಸ್ವಾತಂತ್ರ್ಯ ದಿನದ ಬಗ್ಗೆ ತಿಳಿಸಿಕೊಡುವಿರಾ?

ಗುರುಗಳು : ನಮ್ಮ ಹಿರಿಯರು ಎಲ್ಲರೂ ಒಟ್ಟು ಸೇರಿ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದರು. ಅವರಲ್ಲಿ ಗಾಂಧೀಜಿಯವರು ಪ್ರಮುಖರು. ಅವರೆಲ್ಲರ ತ್ಯಾಗ, ಬಲಿದಾನಗಳ ಫಲವಾಗಿ ನಾವು ಈವತ್ತು ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದೇವೆ.

ನಯನ : ಗಾಂಧೀಜಿಯವರಲ್ಲದೆ ಬೇರೆ ಯಾರೆಲ್ಲ ಹೋರಾಟ ಮಾಡಿದ್ದಾರೆ ಗುರುಗಳೇ?

ಗುರುಗಳು : ಜವಾಹರ ಲಾಲ್ ನೆಹರು, ವಲ್ಲಭಭಾಯಿ ಪಟೇಲ್, ಸುಭಾಶ್ ಚಂದ್ರ ಬೋಸ್, ಲಾಲಾ ಲಜಪತ್ ರಾಯ್, ಲಾಲ್ ಬಹದ್ದೂರ್ ಶಾಸ್ತ್ರಿ, ಸರೋಜಿನಿ ನಾಯ್ಡು ಮೊದಲಾದವರು. ಇವರಲ್ಲದೆ ಇನ್ನೂ ಹಲವಾರು ಮಂದಿ ಗಾಂಧೀಜಿಯವರ ನೇತೃತ್ವದಲ್ಲಿ ಹೋರಾಟ ಮಾಡಿದ್ದಾರೆ.

ಕಿರಣ : ಅವರೆಲ್ಲರೂ ಸೇರಿ ನಡೆಸಿದ ಹೋರಾಟದಿಂದಾಗಿ ನಮಗೆ ಸ್ವಾತಂತ್ರ್ಯ ಲಭಿಸಿದ್ದು. ಅಲ್ಲವೇ ಗುರುಗಳೇ?

ಗುರುಗಳು : ಹೌದು ಮಕ್ಕಳೇ, 1947 ಆಗಸ್ಟ್ 15 ರಂದು ನಮ್ಮ ದೇಶ ಸ್ವತಂತ್ರವಾಯಿತು. ಅಂದಿನಿಂದ ನಾವು ಪ್ರತಿ ವರ್ಷ ಆಗಸ್ಟ್ 15ನ್ನು ರಾಷ್ಟ್ರೀಯ ಹಬ್ಬವಾಗಿ ಆಚರಿಸುತ್ತೇವೆ. ಅಂದು ಭಾರತದ ರಾಷ್ಟ್ರಧ್ವಜವನ್ನು ಏರಿಸುತ್ತೇವೆ.

*- ಸಮಿತಿ ರಚನೆ*



## ಉತ್ತರಿಸುವ

1. ಕಿರಣನ ಶಾಲೆಯಲ್ಲಿ ಯಾವ ಉತ್ಸವ ನಡೆಯುವುದಕ್ಕಿತ್ತು?

2. 'ರಾಷ್ಟ್ರಪಿತ' ಎಂದು ಯಾರನ್ನು ಕರೆಯುತ್ತಾರೆ?

3. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಪ್ರಮುಖ ವ್ಯಕ್ತಿಗಳು ಯಾರು?

4. ನಮಗೆ ಸ್ವಾತಂತ್ರ್ಯ ಯಾವಾಗ ಲಭಿಸಿತು?

❖ **ನೀವು ನಿಮ್ಮ ಶಾಲೆಯಲ್ಲಿ ಸ್ವಾತಂತ್ರ್ಯ ದಿನವನ್ನು ಆಚರಿಸುತ್ತೀರಲ್ಲವೇ. ನಿಮ್ಮ ಶಾಲೆಯಲ್ಲಿ ನಡೆದ ಸ್ವಾತಂತ್ರ್ಯ ದಿನದ ವಿವರಣೆಯನ್ನು ಬರೆಯಿರಿ.**

## ಜೋಡಿಸುವ

❖ ಸ್ವಾತಂತ್ರ್ಯ ಹೋರಾಟಗಾರರ ಚಿತ್ರಗಳು ಮತ್ತು ಹೆಸರುಗಳನ್ನು ಜೋಡಿಸಿರಿ.

ಬಾಲಗಂಗಾಧರ ತಿಲಕ್



ಮಹಾತ್ಮಾ ಗಾಂಧಿ



ಮೌಲಾನ ಅಬುಲ್ ಕಲಾಂ ಆಜಾದ್



ಭಗತ್ ಸಿಂಗ್



ಝಾನ್ಸಿ ರಾಣಿ ಲಕ್ಷ್ಮಿಬಾಯಿ



# ನನ್ನ ದೇಶ ನನ್ನ ಜನ

ನನ್ನ ದೇಶ ನನ್ನ ಜನ
ನನ್ನ ಮಾನ ಪ್ರಾಣ ಘನ
ತೀರಿಸುವೆನೆ ಅದರ ಋಣ
ಈ ಒಂದೇ ಜನ್ಮದಿ?

ಕೆಂಪು ನೆಲದ ಹಸಿರು ಬೆಳೆ
ಕಪ್ಪು ಬಣ್ಣ ಮೊಗದ ಕಳೆ
ಸೂರ್ಯ ಚಂದ್ರ ಚುಕ್ಕಿಗಳೆ
ನಮ್ಮ ಹಿರಿಯ ಒಕ್ಕಲು

ನೂರು ಭಾವ ಭಾಷೆ ನೆಲೆ
ನೂರು ಬಣ್ಣ ವೇಷ ಕಲೆ
ಸ್ವಚ್ಛಂದದ ಹಕ್ಕಿಗಳೆ
ನಮ್ಮ ಹಾಡು ಬದುಕಲು

ಪ್ರಾಚೀನವ ತಿಕ್ಕಿ ತೊಳೆ
ವರ್ತಮಾನ ಜೀವಕಳೆ
ಉಕ್ಕೇರಲಿ ಬಾಳ ಹೊಳೆ
ಆ ಭವಿಷ್ಯದೊಡಲಿಗೆ

ಮೈ ಕೊಡವಿದೆ ಮೂಕ ಜನ
ಕೈ ಹಿಡಿಯಿರಿ ನಾಕು ಚಣ
ಎದ್ದೇಳಲಿ ಎಲ್ಲ ಗುಣ
ಆ ಸಮೃದ್ಧ ಬಾಳಿಗೆ

✍ ಚೆನ್ನವೀರ ಕಣವಿ

## ಹಾಡುವ

- ಈ ಪದ್ಯವನ್ನು ರಾಗವಾಗಿ ಹಾಡಿರಿ.

## ಬರೆಯುವ

- ಈ ಪದ್ಯದಲ್ಲಿ ಬರುವ ಪ್ರಾಸ ಪದಗಳನ್ನು ಬರೆಯಿರಿ.

ಮಾದರಿ : ಬೆಳೆ - ಕಳೆ

-

-

## ಬರೆಯುವ

1. ಪದ್ಯದಲ್ಲಿ ಇಷ್ಟವಾದ ಸಾಲು ಯಾವುದು?

2. ಭಾರತದ ನೆಲದಲ್ಲಿ ಕಾಣುವ ವಿಶೇಷತೆ ಏನು?

## ಬರೆಯುವ

❖ ಬಿಟ್ಟ ಪದ ತುಂಬಿಸಿರಿ.

ಕೆಂಪು ನೆಲದ .......................... ಬೆಳೆ

ಕಪ್ಪು ಬಣ್ಣ .......................... ಕಳೆ

.......................... ಮೂಕ ಜನ

.......................... ನಾಕು ಚಣ

## ಓದುವ

❖ ಕೆಳಗೆ ಕೊಟ್ಟಿರುವ ಮಾಹಿತಿಗಳನ್ನು ಓದುವ.




ಇದು ಅಶೋಕ ಸ್ತಂಭ

ಇದು ನಮ್ಮ ರಾಷ್ಟ್ರ ಲಾಂಛನ



ಇದು ತಾವರೆ

ಇದು ನಮ್ಮ ರಾಷ್ಟ್ರೀಯ ಪುಷ್ಪ.



ಇದು ಹುಲಿ.

ಇದು ನಮ್ಮ ರಾಷ್ಟ್ರೀಯ ಮೃಗ.



ಇದು ಆಲದ ಮರ.

ಇದು ನಮ್ಮ ರಾಷ್ಟ್ರೀಯ ವೃಕ್ಷ.



# ಮಕ್ಕಳ ಮೆಚ್ಚಿನ ಚಾಚಾಜಿ

ಪಂಡಿತ್ ಜವಹರಲಾಲ್ ನೆಹರುರವರು 1889 ನವೆಂಬರ್ 14 ರಂದು ಉತ್ತರ ಪ್ರದೇಶದ ಅಲಹಾಬಾದ್(ಈಗಿನ ಪ್ರಯಾಗ್‌ರಾಜ್)ನಲ್ಲಿ ಜನಿಸಿದರು. ಇವರ ತಂದೆಯ ಹೆಸರು ಮೋತಿಲಾಲ್ ನೆಹರು. ಇವರು ಪ್ರಮುಖ ವಕೀಲರಾಗಿದ್ದರು. ನೆಹರುರವರು ಉನ್ನತ ವ್ಯಾಸಂಗದ ನಂತರ ಮಹಾತ್ಮಾ ಗಾಂಧೀಜಿಯವರೊಂದಿಗೆ ಸೇರಿಕೊಂಡು ಸುದೀರ್ಘಕಾಲ ಭಾರತದ ಸ್ವಾತಂತ್ರ್ಯ ಹೋರಾಟವನ್ನು ನಡೆಸಿದ್ದಾರೆ. 1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ ನಂತರ ಇವರು ಸ್ವತಂತ್ರ ಭಾರತದ ಮೊದಲ ಪ್ರಧಾನಮಂತ್ರಿಯಾದರು.



ನೆಹರುರವರು ಮಕ್ಕಳ ಬಗ್ಗೆ ಅದ್ಭುತವಾದ ಪ್ರೀತಿಯನ್ನು ಹೊಂದಿದ್ದರು. ಮಕ್ಕಳು ರಾಷ್ಟ್ರದ ಭವಿಷ್ಯದ ಆಧಾರ ಸ್ತಂಭಗಳೆಂದು ಪರಿಗಣಿಸಿದ್ದರು. 'ಯಾವುದೇ ರಾಷ್ಟ್ರದ ಆಸ್ತಿ ಅದರ ಭಂಡಾರದಲ್ಲಿಲ್ಲ ಮಕ್ಕಳಿರುವ ಶಾಲೆಗಳಲ್ಲಿದೆ.' ಎಂದು ಹೇಳುತ್ತಿದ್ದರು. ಇವರ ಪ್ರಕಾರ ಮಕ್ಕಳೇ ದೇಶದ ಸಂಪತ್ತು. ನೆಹರುರವರು ಮಕ್ಕಳ ಸಾಮರ್ಥ್ಯದ ಮೇಲೆ ಅಪಾರ ನಂಬಿಕೆಯನ್ನು ಇಟ್ಟಿದ್ದರು. ದೇಶದ ಭವಿಷ್ಯವನ್ನು ಪರಿವರ್ತಿಸುವ ಸಾಮರ್ಥ್ಯವನ್ನು ಮಕ್ಕಳು ಹೊಂದಿದ್ದಾರೆ ಎನ್ನುವ ನಂಬಿಕೆಯಿಂದಾಗಿ ಅವರು ಮಕ್ಕಳ ಶಿಕ್ಷಣ, ಪಾಲನೆ ಮತ್ತು ಅಭಿವೃದ್ಧಿಯ ಕಡೆಗೆ ಹೆಚ್ಚಿನ ಪ್ರಾಮುಖ್ಯವನ್ನು ನೀಡಿದ್ದರು.

ಇವರು ತಮ್ಮ ಜಾಕೆಟಿನಲ್ಲಿ ಯಾವಾಗಲೂ ಗುಲಾಬಿ ಹೂ ಇಟ್ಟುಕೊಳ್ಳುತ್ತಿದ್ದರು. ಮಕ್ಕಳಿಗೆ ಪ್ರೀತಿಯ ಕೊಡುಗೆಯಾಗಿ ಹೂ ಕೊಡುತ್ತಿದ್ದರು. ಹಾಗಾಗಿ ಮಕ್ಕಳಿಗೂ ನೆಹರೂರವರಿಗೂ ಒಂದು ಪ್ರೀತಿಯ ನಂಟಿತ್ತು. ಮಕ್ಕಳು ಅವರನ್ನು ಪ್ರೀತಿಯಿಂದ 'ಚಾಚಾಜಿ' ಎಂದು ಕರೆಯುತ್ತಿದ್ದರು. ಭಾರತದಾದ್ಯಂತ ಇಂದಿಗೂ ಎಲ್ಲರೂ ಅವರ ಹೆಸರನ್ನು 'ಚಾಚಾ ನೆಹರು' ಎಂದು ಪ್ರೀತಿಯಿಂದ ನೆನಪಿಸಿಕೊಳ್ಳುತ್ತಾರೆ. 1964 ಮೇ 27 ರಂದು ಅವರು ನಿಧನ ಹೊಂದಿದರು. ನೆಹರೂರವರಿಗೆ ಮಕ್ಕಳ ಮೇಲಿದ್ದ ಅಪಾರ ಪ್ರೀತಿಯನ್ನು ಪರಿಗಣಿಸಿ ಅವರ ಜನ್ಮದಿನವಾದ ನವೆಂಬರ್ 14ನ್ನು 'ಮಕ್ಕಳ ದಿನಾಚರಣೆ'ಯಾಗಿ ಆಚರಿಸಲಾಗುತ್ತದೆ.



## ಉತ್ತರಿಸುವ

1. ನೆಹರುರವರು ಎಲ್ಲಿ ಜನಿಸಿದರು?

2. ಸ್ವತಂತ್ರ ಭಾರತದ ಮೊದಲ ಪ್ರಧಾನಿ ಯಾರು?

3. ಮಕ್ಕಳ ದಿನವನ್ನು ಯಾವಾಗ ಆಚರಿಸುತ್ತೇವೆ?

3. ಮಕ್ಕಳ ನೆಹರುರವರನ್ನು ಪ್ರೀತಿಯಿಂದ ಕರೆಯುತ್ತಿದ್ದ ಹೆಸರು ಏನು?

4. ಯಾರ ಜನ್ಮದಿನವನ್ನು ಮಕ್ಕಳ ದಿನಾಚರಣೆಯಾಗಿ ಆಚರಿಸಲಾಗುತ್ತದೆ?

❖ **ಹೊಂದಿಸಿರಿ.**

| | | |
|---|---|---|
| 1. | ನೇತಾಜಿ | ಜವಾಹರಲಾಲ್ ನೆಹರು |
| 2. | ಬಾಪೂಜಿ | ಮಹಾತ್ಮ ಗಾಂಧೀಜಿ |
| 3. | ಚಾಚಾಜಿ | ಸುಭಾಷ್ ಚಂದ್ರ ಬೋಸ್ |




**ನನ್ನ ಕಿರು ಪರಿಚಯ**

ನನ್ನ ಹೆಸರು : ..........................................

ತಂದೆಯ ಹೆಸರು : ..........................................

ತಾಯಿಯ ಹೆಸರು : ..........................................

ಜನನ ದಿನಾಂಕ : ..........................................

ನಾನು ಹುಟ್ಟಿದ ಊರು : ..........................................

ನನ್ನ ಶಾಲೆ : ..........................................

ನನಗೆ ಇಷ್ಟವಾದದ್ದು : ..........................................

**ನೀವು ಬರೆದ ಮಾಹಿತಿಗಳನ್ನು ಸೂಕ್ತ ಸ್ಥಳದಲ್ಲಿ ತುಂಬಿಸಿರಿ.**

ನಾನು ________ ನನ್ನ ತಂದೆ ________
ತಾಯಿ ________ ನಾನು ________
ರಂದು ________
ಎಂಬ ಊರಲ್ಲಿ ಜನಿಸಿದೆನು.
ನಾನು ________ ಶಾಲೆಯ 2ನೇ ತರಗತಿಯಲ್ಲಿ ಕಲಿಯುತ್ತಿದ್ದೇನೆ. ನನಗೆ ________ ಅಂದರೆ ತುಂಬಾ ಇಷ್ಟ.



# 4 ಆರೋಗ್ಯವೇ ಭಾಗ್ಯ



# ಊಟ ಬಲ್ಲವನಿಗೆ ರೋಗವಿಲ್ಲ

ಸಂತೆಯಲ್ಲಿ ತರತರದ ತಿಂಡಿಗಳನ್ನು ಕಂಡು ಕಿರಣನಿಗೆ ಆಸೆಯಾಯಿತು. ಅವನ ಒತ್ತಾಯಕ್ಕೆ ಅಪ್ಪ ಅವನು ಕೇಳಿದ ತರತರದ ತಿಂಡಿಗಳನ್ನೂ ಬಣ್ಣ ಬಣ್ಣದ ಪಾನೀಯಗಳನ್ನೂ ಖರೀದಿಸಿಕೊಟ್ಟರು. ಇವುಗಳನ್ನು ಸೇವಿಸಿ ಕಿರಣನ ಹೊಟ್ಟೆ ತುಂಬಿತು.

ಮನೆಗೆ ತಲುಪಿದ ಸ್ವಲ್ಪ ಹೊತ್ತಿನಲ್ಲಿ ಅವನಿಗೆ ಹೊಟ್ಟೆನೋವು ಶುರುವಾಯಿತು. ಅಪ್ಪ ಅಮ್ಮ ರಾತ್ರಿಯೆಲ್ಲಾ ಆರೈಕೆ ಮಾಡಿದರೂ ಅವನಿಗೆ ಹೊಟ್ಟೆನೋವು ಕಡಿಮೆ ಆಗಲೇ ಇಲ್ಲ.





ಮರುದಿನ ಅಪ್ಪ ಅವನನ್ನು ಕರೆದುಕೊಂಡು ಆಸ್ಪತ್ರೆಗೆ ಹೋದರು.

ಅಪ್ಪ : ಡಾಕ್ಟರ್, ನನ್ನ ಮಗನಿಗೆ ಹೊಟ್ಟೆನೋವು.

ಡಾಕ್ಟರ್ : ನಿನ್ನೆ ನೀನು ಏನು ಆಹಾರ ಸೇವಿಸಿದೆ?

ಕಿರಣ : ಅದೂ... ಅದೂ...

ಅಪ್ಪ : ನಿನ್ನೆ ಸಂತೆಯಿಂದ ಖರೀದಿಸಿದ ಕರಿದ ತಿಂಡಿ ಹಾಗೂ ಪಾನೀಯಗಳನ್ನು ಸೇವಿಸಿದ್ದಾನೆ.

ಡಾಕ್ಟರ್ : ಹೌದೆ ಕಿರಣ?

ಕಿರಣ : ಹೌದು ಡಾಕ್ಟರ್. ನನಗೆ ಆ ತಿಂಡಿಗಳೆಂದರೆ ತುಂಬಾ ಇಷ್ಟ

ಡಾಕ್ಟರ್ : ಹಾಂ.. ಅದೇ ನಿನ್ನ ಹೊಟ್ಟೆ ನೋವಿಗೆ ಕಾರಣ. ಹಾಗೆಲ್ಲಾ ಸಂತೆಯಿಂದ ಕಂಡ ಕಂಡ ಆಹಾರ ವಸ್ತುಗಳನ್ನು ಖರೀದಿಸಿ ತಿನ್ನಬಾರದು.

ಕಿರಣ : ಹಾಗಾದರೆ ಐಸ್‌ಕ್ರೀಂ ತಿನ್ನಬಹುದೇ?

ಡಾಕ್ಟರ್ : ಐಸ್‌ಕ್ರೀಂ, ಕರಿದ ತಿಂಡಿ, ಬರ್ಗರ್, ಪೀಝ ಮತ್ತು ಬಣ್ಣದ ಪಾನೀಯಗಳ ಅತಿಯಾದ ಸೇವನೆ ನಮ್ಮ ಆರೋಗ್ಯಕ್ಕೆ ಹಾನಿಯನ್ನುಂಟು ಮಾಡುತ್ತವೆ.




'ಅತಿಯಾದರೆ ಅಮೃತವು ವಿಷ' ಎನ್ನುವ ಗಾದೆ ಮಾತು ನೀನು ಕೇಳಿಲ್ಲವೆ?

ಅಪ್ಪ : ಹೌದು ಡಾಕ್ಟರ್. ಕಿರಣನು ಇಂತಹ ತಿಂಡಿಗಳಿಗಾಗಿ ಬಹಳ ಹಟ ಮಾಡುತ್ತಾನೆ.

ಡಾಕ್ಟರ್ : ಬೇಡ ಮಗು. ಈ ತಿಂಡಿಗಳ ಅತಿಯಾದ ಸೇವನೆಯಿಂದ ಜೀವಕ್ಕೂ ಅಪಾಯವಿದೆ.

ಕಿರಣ : ಹಾಗಾದರೆ ನಾವು ಯಾವ ಯಾವ ಆಹಾರ ವಸ್ತುಗಳನ್ನು ಸೇವಿಸಬಹುದು ಡಾಕ್ಟರ್?

ಡಾಕ್ಟರ್ : ಕಿರಣ, ನಾವು ಆರೋಗ್ಯಕರವಾದ ಆಹಾರವನ್ನೇ ಸೇವಿಸಬೇಕು.

ಕಿರಣ : ಆರೋಗ್ಯಕರ ಆಹಾರ ಯಾವುದು ಡಾಕ್ಟರ್?

ಡಾಕ್ಟರ್ : ಹಣ್ಣು, ತರಕಾರಿ, ಧಾನ್ಯಗಳು, ಹಾಲು, ಮೊಟ್ಟೆ, ಮಾಂಸ ಇವೆಲ್ಲವೂ ಆರೋಗ್ಯಕರ ಆಹಾರ ವಸ್ತುಗಳು. ಇವುಗಳನ್ನು ಸೇವಿಸುವುದರೊಂದಿಗೆ ವ್ಯಾಯಾಮವನ್ನೂ ಮಾಡಬೇಕು.

ಕಿರಣ : ಸರಿ ಡಾಕ್ಟರ್. ನನಗಿದೆಲ್ಲ ತಿಳಿದಿರಲಿಲ್ಲ. ಇನ್ನು ಮುಂದೆ ನೀವು ಹೇಳಿದಂತೆ ಆರೋಗ್ಯಕರ ಆಹಾರವನ್ನೇ ಸೇವಿಸುವೆ. ನನ್ನ ಗೆಳೆಯರಿಗೂ ತಿಳಿಸುವೆ.

ಡಾಕ್ಟರ್ : ಸರಿ ಕಿರಣ. ನಾನು ಕೊಡುವ ಔಷಧಿಗಳನ್ನು ಸರಿಯಾಗಿ ಸೇವಿಸು. ಹೊಟ್ಟೆನೋವು ಕಡಿಮೆಯಾಗುತ್ತದೆ.

ಕಿರಣ : ಆಯಿತು ಡಾಕ್ಟರ್. ಧನ್ಯವಾದಗಳು.

*- ಸಮಿತಿ ರಚನೆ*



## ಬರೆಯುವ

❖ ನೀಡಿರುವ ಸಂತೆಯ ಚಿತ್ರವನ್ನು ನಿರೀಕ್ಷಿಸಿ ಟಿಪ್ಪಣಿ ಬರೆಯಿರಿ.



## ಬರೆಯುವ

❖ **ಸರಿಯಾದ ಪದವನ್ನು ಆರಿಸಿ ಬರೆಯಿರಿ.**

**(ವ್ಯಾಯಾಮ, ಹೊಟ್ಟೆನೋವು, ಧನ್ಯವಾದ, ಅತಿಯಾಗಿ, ಇಷ್ಟ, ಮಾಹಿತಿ)**

ಕಿರಣನಿಗೆ ಕರಿದ ತಿಂಡಿಗಳೆಂದರೆ ತುಂಬಾ ...................... ಆ ರೀತಿಯ ತಿಂಡಿಗಳನ್ನು ಅವನು .................. ಸೇವಿಸುತ್ತಿದ್ದನು. ಹೀಗಿರಲು ಒಂದು ದಿನ ಕಿರಣನಿಗೆ ..................... ಶುರುವಾಯಿತು. ಡಾಕ್ಟರ್ ಕಿರಣನಿಗೆ ಉತ್ತಮ ಆಹಾರದ ಕುರಿತು ..................... ನೀಡಿದರು. ಆರೋಗ್ಯಕರ ಆಹಾರದೊಂದಿಗೆ ........................... ಮಾಡುವಂತೆ ಸಲಹೆ ನೀಡಿದರು. ಕಿರಣನು ಡಾಕ್ಟರಿಗೆ .......................... ಸಲ್ಲಿಸಿದನು.

❖ **ಪದ ಸೂರ್ಯದ ಸಹಾಯದಿಂದ ಆರೋಗ್ಯದ ಕುರಿತಾದ ಟಿಪ್ಪಣಿ ತಯಾರಿಸಿರಿ.**






❖ ಕೆಳಗೆ ಕೊಡಲಾದ ಆಹಾರ ವಸ್ತುಗಳ ಹೆಸರು ಬರೆಯಿರಿ.
ಈ ವಸ್ತುಗಳನ್ನು ಕೆಳಗಿನಂತೆ ವರ್ಗೀಕರಿಸಿರಿ.

















| ತರಕಾರಿಗಳು | ಗೆಡ್ಡೆಗೆಣಸುಗಳು | ಹಣ್ಣುಗಳು |
|---|---|---|
| | | |

# ಜಾಣ ಪಂಡಿತ

ಅಮರಾವತಿಯಲ್ಲಿ ಒಬ್ಬ ಸೋಮಾರಿಯಾದ ರಾಜನಿದ್ದನು. ಅವನು ಅತಿಯಾಗಿ ತಿಂದು ಯಾವ ಕೆಲಸಗಳನ್ನೂ ಮಾಡದೆ ಸುಮ್ಮನೆ ಮಲಗುತ್ತಿದ್ದನು. ಹೀಗಾಗಿ ರಾಜನಿಗೆ ಬೊಜ್ಜು ಬೆಳೆಯತೊಡಗಿತು. ದಿನದಿಂದ ದಿನಕ್ಕೆ ಬೊಜ್ಜು ಹೆಚ್ಚಾಗಿ ರಾಜನ ಆರೋಗ್ಯವು ಹದಗೆಟ್ಟಿತು. ಕೂಡಲೇ ಆಸ್ಥಾನ ವೈದ್ಯರನ್ನು ಕರೆಸಲಾಯಿತು. ಅವರ ಚಿಕಿತ್ಸೆ ಫಲಕಾರಿಯಾಗಲಿಲ್ಲ. ಇತರ ದೇಶಗಳಿಂದ ವೈದ್ಯರನ್ನು ಕರೆಸುವಂತೆ ರಾಜನು ಮಂತ್ರಿಗಳಿಗೆ ಆಜ್ಞೆ ಮಾಡಿದನು. ಅವರು ಚಿಕಿತ್ಸೆ ಮಾಡಿದರೂ ಪ್ರಯೋಜನವಾಗಲಿಲ್ಲ.

ದಿನಗಳು ಕಳೆದವು. ರಾಜನ ತೂಕವು ಹೆಚ್ಚಿತು. ಹೀಗಿರಲು ಒಂದು ದಿನ ಮಂತ್ರಿಯು "ಮಹಾರಾಜ, ಪಕ್ಕದ ಊರಿನಲ್ಲಿ ಒಬ್ಬರು ಪಂಡಿತರಿದ್ದಾರೆ. ನಾನು ಅವರನ್ನು ಭೇಟಿಯಾಗಿ ನಿಮ್ಮ ಅನಾರೋಗ್ಯದ ಕುರಿತು ಅವರಲ್ಲಿ ತಿಳಿಸಿದ್ದೇನೆ. ಆದರೆ...." ಎಂದು ತನ್ನ ಮಾತನ್ನು ಅರ್ಧದಲ್ಲಿ ನಿಲ್ಲಿಸಿದನು.



"ಏನಾಯಿತು ಮಂತ್ರಿಗಳೇ? ನನಗೆ ಅವರು ಔಷಧಿಯನ್ನು ಕೊಡುವುದಿಲ್ಲವೇ?" ಎಂದು ರಾಜನು ಕೇಳಿದನು. ಆಗ ಮಂತ್ರಿ "ಹಾಗಲ್ಲ ಮಹಾರಾಜ, ಅವರೊಂದು ಬೆಟ್ಟದ ತುದಿಯಲ್ಲಿ ಗುಡಿಸಲು ಕಟ್ಟಿ ಅಲ್ಲಿ ವಾಸ ಮಾಡುತ್ತಿದ್ದಾರೆ. ನಿಮಗೆ ಅಲ್ಲಿಗೆ ಹೋಗಲು ಸಾಧ್ಯವೇ?" ಎಂದು ಕೇಳಿದನು. ರಾಜನು ಸಂತೋಷದಿಂದ "ಅದಕ್ಕೇನಂತೆ? ನನಗೆ ನನ್ನ ಆರೋಗ್ಯ ಸರಿಹೋಗಬೇಕು ಅಷ್ಟೇ.." ಎಂದನು.

ಪಂಡಿತರನ್ನು ಭೇಟಿಯಾಗಲು ರಾಜನು ಮಂತ್ರಿಯೊಂದಿಗೆ ಪಕ್ಕದ ಊರಿಗೆ ಹೊರಟನು. ಅಲ್ಲಿಗೆ ತಲುಪಲು ಕಾಲು ನಡಿಗೆಯಿಂದ ಹೋಗುವ ದಾರಿ ಮಾತ್ರ ಇತ್ತು. ರಾಜನು ಪಲ್ಲಕ್ಕಿಯಿಂದ ಇಳಿದು ನಡೆದುಕೊಂಡೇ ಬೆಟ್ಟದ ತುದಿಗೆ ತಲುಪಿದನು. ಅಲ್ಲಿ ಯಾರೂ ಇರಲಿಲ್ಲ.





"ಮಂತ್ರಿಗಳೇ.. ಇಲ್ಲಿ ಪಂಡಿತರು ಕಾಣಿಸುತ್ತಿಲ್ಲವಲ್ಲ?" ಎಂದು ರಾಜನು ಕೇಳಿದನು. ಪಂಡಿತನನ್ನು ಹುಡುಕಿದರೂ ಸಿಗಲಿಲ್ಲ. ರಾಜನು ಮಂತ್ರಿಯೊಂದಿಗೆ ಅರಮನೆಗೆ ಮರಳಿದನು.

ಪ್ರತಿದಿನ ರಾಜನು ಪಂಡಿತನನ್ನು ಭೇಟಿಯಾಗಲು ಹೋಗುತ್ತಿದ್ದನು. ಆದರೆ ಪಂಡಿತನು ರಾಜನಿಗೆ ಸಿಗುತ್ತಿರಲಿಲ್ಲ. ರಾಜನೂ ತನ್ನ ಛಲ ಬಿಡದೆ ಪಂಡಿತನಲ್ಲಿಗೆ ಹೋಗುತ್ತಿದ್ದನು.



ದಿನಗಳು ಉರುಳಿದವು. ಕೊನೆಗೊಂದು ದಿನ ರಾಜನಿಗೆ ಪಂಡಿತನ ಭೇಟಿಯಾಯಿತು. ಆಗ ಪಂಡಿತನು "ಮಹಾರಾಜ, ನೀವೀಗ ಆರೋಗ್ಯವಾಗಿದ್ದೀರಿ. ಈಗ ನಿಮಗೆ ಯಾವುದೇ ಔಷಧದ ಅಗತ್ಯವಿಲ್ಲ" ಎಂದನು. ಔಷಧಿ ಸೇವಿಸದೇ ಆರೋಗ್ಯವನ್ನು ಹಿಂದಕ್ಕೆ ಪಡೆದ ರಾಜನು ಆಶ್ಚರ್ಯದಿಂದ "ಪಂಡಿತರೇ, ಇದು ಹೇಗೆ ಸಾಧ್ಯವಾಯಿತು?" ಎಂದು ಕೇಳಿದನು. ಅದಕ್ಕೆ ಪಂಡಿತನು "ರಾಜಾ, ನಿಮ್ಮ ಶರೀರಕ್ಕೆ ವ್ಯಾಯಾಮದ ಅಗತ್ಯವಿತ್ತು. ಹಾಗಾಗಿ ನೀವು ಬರುವಾಗ ಉದ್ದೇಶ ಪೂರ್ವಕವಾಗಿಯೇ ನಾನು ನಿಮ್ಮ ಎದುರಿಗೆ ಕಾಣಿಸಿಕೊಳ್ಳುತ್ತಿರಲಿಲ್ಲ.



ನನ್ನನ್ನು ಭೇಟಿಯಾಗಲೆಂದು ಪ್ರತಿದಿನ ನೀವು ಈ ಬೆಟ್ಟವನ್ನು ಹತ್ತಿ ಇಳಿದಿರುತ್ತೀರಿ. ಹಾಗಾಗಿ ನಿಮ್ಮ ಬೊಜ್ಜು ಕರಗಿ ತೂಕವೂ ಕಡಿಮೆಯಾಯಿತು." ಎಂದನು.

ಪಂಡಿತನ ಮಾತುಗಳನ್ನು ಕೇಳಿ ರಾಜನಿಗೆ ತುಂಬಾ ಸಂತೋಷವಾಯಿತು. ಅವನು ಪಂಡಿತನಿಗೆ ಬಹಳಷ್ಟು ಉಡುಗೊರೆಗಳನ್ನು ನೀಡಿ ಗೌರವಿಸಿದನು.

*- ಸಮಿತಿ ರಚನೆ*

## ಬರೆಯುವ

❖ **ಕೆಳಗಿನ ಹೇಳಿಕೆಗಳು ಉತ್ತರವಾಗಿ ಬರುವಂತೆ ಪ್ರಶ್ನೆಗಳನ್ನು ತಯಾರಿಸಿರಿ.**

1. ಅಮರಾವತಿಯಲ್ಲಿ ಸೋಮಾರಿಯಾದ ಒಬ್ಬ ರಾಜನಿದ್ದನು.

2. ರಾಜನು ಆಸ್ಥಾನ ವೈದ್ಯರನ್ನು ಕರೆಸಿದನು.

3. ಪಂಡಿತನನ್ನು ಭೇಟಿಯಾಗಲು ರಾಜನು ಪಕ್ಕದ ಊರಿಗೆ ಹೊರಟನು.

4. ರಾಜನ ಶರೀರಕ್ಕೆ ವ್ಯಾಯಾಮದ ಅಗತ್ಯವಿತ್ತು.

5. ಪಂಡಿತನಿಗೆ ರಾಜನು ಉಡುಗೊರೆ ನೀಡಿ ಸನ್ಮಾನಿಸಿದನು.

❖ **ಮಾದರಿಯಂತೆ ಪದಗಳನ್ನು ಬರೆಯಿರಿ.**

ಮಾದರಿ: ರಾಜ್ಯ - ರಾಜ್ಯಗಳು

| | | | |
|---|---|---|---|
| ಉಡುಗೊರೆ | - | ಔಷಧಿ | - |
| ದಿನ | - | ಸಲಹೆ | - |
| ವ್ಯಾಯಾಮ | - | ಅರಮನೆ | - |
| ಬೆಟ್ಟ | - | ದೇಶ | - |

## ಬರೆಯುವ

❖ ಅನಾರೋಗ್ಯ ನಿಮಿತ್ತ ರಾಜನು ದಿನನಿತ್ಯ ಪಂಡಿತನನ್ನು ಭೇಟಿಯಾಗಲು ಹೋಗುತ್ತಿದ್ದನು. ಆದರೆ ರಾಜನಿಗೆ ಪಂಡಿತನು ಕಾಣಲು ಸಿಗುತ್ತಿರಲಿಲ್ಲ. ಕೊನೆಗೆ ಒಂದುದಿನ ರಾಜನಿಗೆ ಪಂಡಿತನ ಭೇಟಿಯಾಯಿತು. ರಾಜ ಹಾಗೂ ಪಂಡಿತರ ಮಧ್ಯೆ ನಡೆದ ಮಾತುಕತೆಯನ್ನು ಸಂಭಾಷಣಾ ರೂಪದಲ್ಲಿ ಬರೆಯಿರಿ.



## ಬರೆಯುವ

❖ ಪದಗಳನ್ನು ಕ್ರಮೀಕರಿಸಿ ವಾಕ್ಯಗಳನ್ನು ಸರಿಪಡಿಸಿ ಬರೆಯಿರಿ.

1. ಒಬ್ಬ / ರಾಜನಿದ್ದನು / ಸೋಮಾರಿಯಾದ / ಅಮರಾವತಿಯಲ್ಲಿ

2. ಆಸ್ಥಾನ / ರಾಜನು / ಕರೆಸಿದನು / ವೈದ್ಯರನ್ನು

3. ಊರಿಗೆ/ ಪಂಡಿತನನ್ನು/ ರಾಜನು / ಭೇಟಿಯಾಗಲು / ಪಕ್ಕದ / ಹೊರಟನು

4. ಅಗತ್ಯವಿತ್ತು/ ರಾಜನ / ವ್ಯಾಯಾಮದ / ಶರೀರಕ್ಕೆ

5. ಉಡುಗೊರೆ /ಪಂಡಿತನಿಗೆ / ಸನ್ಮಾನಿಸಿದನು / ರಾಜನು / ನೀಡಿ

❖ ಮಾದರಿಯಂತೆ ಪದಗಳನ್ನು ಬರೆಯಿರಿ.

- ಕಡಿಮೆ × ಹೆಚ್ಚು
- ಆರೋಗ್ಯ × ____________
- ಸಂತೋಷ × ____________
- ಗೌರವ × ____________

## ಬರೆಯುವ

❖ ಕೆಳಗಿನ ಚಿತ್ರಗಳನ್ನು ಸೂಚನೆಯಂತೆ ವರ್ಗೀಕರಿಸಿರಿ.










| ಆಹಾರಕ್ಕಾಗಿ | ವ್ಯಾಯಾಮಕ್ಕಾಗಿ |
|---|---|
| | |

## ಹಾಡಿ ನಲಿಯುವ



ಕಾಲು ಕೊಟ್ಟು ಬಾಳು ತಂದೆ, ಥೈ ಥಕ್ಕ ಥೈ!
ಬಾಳು ಕೊಟ್ಟು ಗಡಿಗೆ ತಂದೆ, ಥೈ ಥಕ್ಕ ಥೈ!
ಗಡಿಗೆ ಕೊಟ್ಟು ಹಣ್ಣು ತಂದೆ, ಥೈ ಥಕ್ಕ ಥೈ!
ಹಣ್ಣು ಕೊಟ್ಟು ಎತ್ತು ತಂದೆ, ಥೈ ಥಕ್ಕ ಥೈ!
ಎತ್ತು ಕೊಟ್ಟು ಎಣ್ಣೆ ತಂದೆ, ಥೈ ಥಕ್ಕ ಥೈ!
ಎಣ್ಣೆ ಕೊಟ್ಟು ಗಂಡ ತಂದೆ, ಥೈ ಥಕ್ಕ ಥೈ!



❖ ಈ ಪದ್ಯಕ್ಕೆ ಪೂರಕವಾದ ಕಥೆಯನ್ನು ಹಿರಿಯರಿಂದ ಕೇಳಿ ತಿಳಿದು ತರಗತಿಯಲ್ಲಿ ಹೇಳಿರಿ.

# ಭಾರತದ ಸಂವಿಧಾನ

ಭಾಗ IV ಕ

## ಕರ್ತವ್ಯಗಳು

**51 ಕ. ಮೂಲಭೂತ ಕರ್ತವ್ಯಗಳು - ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಪೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ದಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

## ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆ ಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.

*ಸಂಪರ್ಕಿಸಬೇಕಾದ ವಿಳಾಸ:*

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

ಶ್ರೀ ಗಣೇಶ್, ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ - 34

ದೂರವಾಣಿ 0471 - 2326603

ಇ- ಮೇಲ್: childrightscpcr@kerala.gov.in, rtecpcr@kerala.gov.in

ವೆಬ್ ಸೈಟ್ : www.kescpcrkerala.gov.in.

ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400

ಕೇರಳ ಪೋಲೀಸ್ ಸಹಾಯವಾಣಿ : 0471 - 3243000/44000/45000

***Online R.T.E Monitoring : www.nireekshana.org.in***